# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**

ಆಶ್ರಯ ತಾಣವ ಗುಡಿಸಿದ ಹಾಗೆ
ಕಲ್ಮಶ ತುಂಬದಂತೆ ಜಾಗ್ರತನಾಗಿ
ಹೃದಯ ಮನಸ್ಸುಗಳ ಸ್ವಚ್ಛವಾಗಿಡು..
ದ್ವೇಷ ಅಸೂಯೆ ತ್ಯಜಿಸುತ್ತಾ ನೀನು
ಪ್ರೀತಿ ಬಾಂಧವ್ಯ ಬೆಳೆಸುತ್ತಾ ಹೋಗಿ
ಮಾನವನಾಗಿ ಬದುಕುವುದಾ ಕಲಿತು ಬಿಡು..
ಮೇಲು ಕೀಳೆನ್ನುವುದಾ ತೊರೆಯುತ ನೀನು
ಜಾತಿ ಬೇದವ ಮರೆಯುತಾ ಸಾಗಿ
ಎಲ್ಲರಲ್ಲೊಂದಾಗುವದನ್ನ ತಿಳಿದು ಬಿಡು..
ಆಗ ನಿನ್ನೆಡೆಗೆ ಬರುವುದು ಸ್ವರ್ಗದ ದಾರಿ..
**ಭಗವಾನ್ ಶ್ರೀ ಕೃಷ್ಣ**



REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 12-09-2025 to 18-09-2025 ಬೆಲೆ: 7-00 ಸಂಪುಟ–5 ಸಂಚಿಕೆ–12 ಪುಟಗಳು–6

ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು





ಜಿಲ್ಲೆಯಲ್ಲಿ ರಸ್ತೆಗಳು ಹದಗೆಟ್ಟಿದ್ದು, ಅದರಲ್ಲೂ ಮಂಗಳೂರು ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ ಸಮೇತ ಹೆಚ್ಚಿನ ರಸ್ತೆಗಳು ದೊಡ್ಡ ದೊಡ್ಡ ಗುಂಡಿಗಳಿಂದ ಕೂಡಿದೆ. ಒಂದು ಕಡೆ ಗುಂಡಿಗಳಾದರೆ ಇನ್ನೊಂದು ಕಡೆ ಖಾಸಗಿ ಬಸ್ಸುಗಳ ಆರ್ಭಟ. ಗುಂಡಿ ಇದೆ ಎಂದು ಸಣ್ಣ ವಾಹನಗಳೇನಾದರೂ ನಿಧಾನವಾಗಿ ಚಲಿಸಿದರೆ ಬಸ್ಸುಗಳ ಕರ್ಕಶ ಹಾರ್ನ್‌ಗಳು ಸವಾರರನ್ನು ವಿಚಲಿತಗೊಳಿಸುತ್ತದೆ. ಇದರಿಂದ ಮತ್ತಷ್ಟು ಅಪಾಯಗಳು ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ದ್ವಿಚಕ್ರ ಸವಾರರು ವಾಹನ ಓಡಿಸಲು ಭಯ ಪಡುವಂತಾಗಿದೆ ಎಂದು ಜನ ಅಳವತ್ತುಕೊಳ್ಳುತ್ತಿದ್ದಾರೆ. ಹಾಗಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮುಂಜಾಗೃತೆ ವಹಿಸುವುದು ಉತ್ತಮ.

## ಒಲೈಕೆಯೇ ಕಾಂಗ್ರೆಸ್ ಬ್ರದರ್ಸ್‌ಗಳ ಅಟ್ಟಹಾಸಕ್ಕೆ ಕಾರಣ –ಕಾಮತ್



**ಮಂಗಳೂರು:** ಮಂಡ್ಯದ ಮದ್ದೂರಿನ ಗಣೇಶ ವಿಸರ್ಜನೆಯ ಮೆರವಣಿಗೆಯ ಮೇಲೆ ಮತಾಂಧ ಕಿಡಿಗೇಡಿಗಳು ಕಲ್ಲು ತೂರಿರುವ ಘಟನೆ ನಡೆದಿದ್ದು ಇದು ರಾಜ್ಯ ಸರ್ಕಾರದ ಒಂದು ಕೋಮಿನ ತುಷ್ಟೀಕರಣದ ಪರಮಾವಧಿ ಹಾಗೂ ಹಿಂದೂ ವಿರೋಧಿ ನೀತಿಯ ಫಲವಾಗಿದೆ ಎಂದು ಶಾಸಕ ವೇದವ್ಯಾಸ ಕಾಮತ್ ರವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಲ್ಲು ತೂರಾಟದಲ್ಲಿ ಮಹಿಳೆಯರು ಹಾಗೂ ಪೊಲೀಸರು ತೀವ್ರವಾಗಿ ಗಾಯಗೊಂಡಿರುವ ಘಟನೆ ಅತ್ಯಂತ ಆತಂಕಕಾರಿಯಾಗಿದೆ. ಈ ಕೃತ್ಯವನ್ನು ಪ್ರತಿಭಟಿಸಿದ ಹಿಂದೂಗಳ ಮೇಲೆಯೇ ಲಾಠಿಚಾರ್ಜ್ ನಡೆಸಿ ಹಿಂದೂಗಳನ್ನು **3ನೇ ಪುಟಕ್ಕೆ**

## ಐ ಯ್ಯಾಮ್ ಎ ಡೈ ಹಾರ್ಡ್ ಕಾಂಗ್ರೆಸ್ ಮ್ಯಾನ್

**ಮಂಗಳೂರು:** ವಿವಾದ ಮಾಡುವುದಾದರೆ ಮಾಡಿಕೊಳ್ಳಲಿ. ನನಗೇನೂ ತೊಂದರೆ ಇಲ್ಲ. ನಾನು ನನ್ನ ಐಡಿಯಾಲಜಿಗೆ ಬದ್ಧತೆ ಇರುವವನು. ಅದನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಐ ಯಾಮ್ ಎ ಟ್ರೂ ಕಾಂಗ್ರೆಸ್ ಮ್ಯಾನ್. ಐ ಆಮ್ ಎ ಡೈ ಹಾರ್ಡ್ ಕಾಂಗ್ರೆಸ್ ಮ್ಯಾನ್. ನಮಗೂ ರಾಜಕೀಯ ವಿರೋಧಿಗಳು ಇರುತ್ತಾರೆ. ಅವರು ಏನು ಬೇಕಾದರೂ ಮಾಡುತ್ತಿರಬಹುದು. ಪಕ್ಷದ ಒಳಗೆ, ಹೊರಗೂ ಇರಬಹುದು. ಇಂತಹ ಚೀಪ್ ಟ್ರಿಕ್ಸ್ ಜನರಿಗೆ ಗೊತ್ತಾಗುತ್ತದೆ. ಪರಮೇಶ್ವರ್ ಏನು ಅಂತ ಇಡೀ ರಾಜ್ಯಕ್ಕೆ ಗೊತ್ತು. ಕಳೆದ 35 ವರ್ಷಗಳಿಂದ ರಾಜಕೀಯದಲ್ಲಿ **3ನೇ ಪುಟಕ್ಕೆ**



## ಕಾನೂನು ಬಿಗಿತದಿಂದ ಜಿಲ್ಲೆಯಲ್ಲಿ ಶಾಂತಿ ಮರುಕಳಿಸಿದೆ –ಭಂಡಾರಿ

**ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ತಿಂಗಳ ಹಿಂದಿನ ಕೋಮು ಸೂಕ್ಷ್ಮ ಘಟನೆಗಳೇ ಇಂದಿನ ಕಾನೂನು ಬಿಗಿತಕ್ಕೆ ಕಾರಣವಾಗಿದ್ದು ಕಠಿಣ ಕ್ರಮಗಳಿಂದ ಜಿಲ್ಲೆಯಲ್ಲಿ ಶಾಂತಿ ಮರುಕಳಿಸಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ. ಮೇ ತಿಂಗಳಲ್ಲಿ ನಡೆದ ಕೊಲೆ, ಚೂರಿ, ಇರಿತ ಪ್ರಕರಣಗಳಿಂದ ಭಯದ ವಾತಾವರಣ ನಿರ್ಮಾಣವಾಗಿತ್ತು. ಇದರಿಂದ ಜಿಲ್ಲೆಯ ಅಭಿವೃದ್ಧಿಗೆ ಕಪ್ಪು ಚುಕ್ಕೆಯಾದರೂ, ರಾಜ್ಯ ಸರ್ಕಾರ ತಕ್ಷಣವೇ ಹೊಸ ಅಧಿಕಾರಿಗಳನ್ನು ನಿಯೋಜಿಸಿ ಕಾನೂನು ಸುವ್ಯವಸ್ಥೆ **3ನೇ ಪುಟಕ್ಕೆ**








# ಸಂಪ್ರದಾಯ

## ಡೊಳ್ಳು ಕುಣಿತ



ಜನಪದ ಕಲೆಗಳಲ್ಲಿ ಗಂಡುಕಲೆ ಎನಿಸಿರುವ ಡೊಳ್ಳು ಕುಣಿತ ಪುರುಷರಿಗೆ ಮೀಸಲಾದ ಕಲೆ. ಆದರೆ ಇಂದು ಮಹಿಳೆಯರು ಕೂಡ ಡೊಳ್ಳು ಕುಣಿತದಲ್ಲಿ ಭಾಗಿಯಾಗುತ್ತಿದ್ದಾರೆ. ಉತ್ತರ ಕರ್ನಾಟಕದ ಬಹುಪಾಲು ಜಿಲ್ಲೆಗಳು ಹಾಗೂ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳು ಕುಣಿತ ತನ್ನ ವಿಶಿಷ್ಟ ವಾದ ನೃತ್ಯ ಶೈಲಿಗಳಿಂದ ಉಳಿದುಕೊಂಡು ಬಂದಿದೆ. ಡೊಳ್ಳಿನ ಹಿಂದೆ ಒಂದು ಕಥೆ ಇದೆ. ಡೊಳ್ಳಾಸುರನೆಂಬ ರಕ್ಕಸ ತಪಸ್ಸಿನಿಂದ ಪರಶಿವನನ್ನು ಮೆಚ್ಚಿಸಿ ಪರಶಿವನು ತನ್ನ ಹೊಟ್ಟೆಯಲ್ಲಿಯೆ ನೆಲೆಸಬೇಕೆಂದು ವರಪಡೆದ. ಅದರಂತೆ ಶಿವನು ಗಂಗೆ, ಗೌರಿಯನ್ನು ಆತ ತೊರೆದು ರಕ್ಕಸನ ಹೊಟ್ಟೆಯನ್ನು ಸೇರಿದ. ಶಿವನಿಲ್ಲದ ಕೈಲಾಸ ಕಳೆಗುಂದಿತು. ದುಃಖಿತರಾದ ಶಿವಗಣಗಳು ವಿಷ್ಣುವಿನ ಮೊರೆಹೊಕ್ಕರು ವಿಷ್ಣುವಿನ ರಹಸ್ಯ ನಿರ್ದೇಶನದಂತೆ ಪಂಚ ರಾತ್ರಿಗಳ ಸೇವೆಯಾಯಿತು. ಶಿವನು ಕೋಪದಿಂದ ಕಣ್ಣು ತೆರೆದರೆ ಪ್ರಳಯವೆ ಉಂಟಾಗುವುದೆಂದು ಅರಿತ ವಿಷ್ಣು ಡೊಳ್ಳಾಸುರನ ಹೊಟ್ಟೆಯನ್ನು ವಾದ್ಯವಿಶೇಷವಾಗಿ ಮಾಡಿಕೊಂಡು ಅವನ ಮೂಳೆಗಳಿಂದ ಡೊಳ್ಳು ಬಾರಿಸಲು ಆರಂಭಿಸಿದ. ಶಿವನು ಆ ವಾದ್ಯದ ದನಿಗೆ ಮಾರು ಹೋಗಿ ಲಾಸ್ಯದಲ್ಲಿ ತೊಡಗಿದ. ಈ ವೇಳೆಗೆ ತೊಡೆಯ ಗೌರಿ, ಜಡೆಯ ಗಂಗೆಯರು ಬಂದು ಶಿವನನ್ನು ಸೇರಿದರು. ಶಿವ ಸುಪ್ರಸನ್ನನಾದ. ಮುಂದೆ ಡೊಳ್ಳು ಶಿವಸ್ತುತಿಯ ವಿಶೇಷ ವಾದ್ಯವಾಯಿತು. ಡೊಳ್ಳು ಮರ ಮತ್ತು ಚರ್ಮದಿಂದ ಮಾಡಿದ ಒಂದು ದೊಡ್ಡ ಆಕಾರದ ವಾದ್ಯ ಎನ್ನಬಹುದು. ತಾಳೆ ಅಥವಾ ಹಲಸಿನ ಮರದಿಂದ ಎರಡುವರೆ ಇಂದ ಮೂರುವರೆ ಅಡಿ ಉದ್ದದ ಹಾಗೂ ಎರಡು ಅಡಿ ವ್ಯಾಸವಿರುವ ಪೀಪಾಯಿ ಆಕಾರದ ಡೊಳ್ಳನ್ನು ಸಿದ್ಧಪಡಿಸಿರುತ್ತಾರೆ. ಇದರ ಎಡಬಾಗಕ್ಕೆ ಆಡಿನ ಚರ್ಮವನ್ನು ಬಲ ಬಾಗಕ್ಕೆ ಕುರಿಯ ಚರ್ಮವನ್ನು ಬಿಗಿಯಾಗಿ ಬಿಗಿಯುತ್ತಾರೆ. ಬಳಿಕ ಡೊಳ್ಳನ್ನು ಬಡಿಯಲು ಬಳಸುವುದು ಸುಮಾರು ಒಂದುವರೆ ಅಡಿ ಉದ್ದದ ಬಿದಿರು ಕೋಲು. ಇದಕ್ಕೆ 'ಗಣಿ' ಎಂದು ಕರೆಯುತ್ತಾರೆ. ಡೊಳ್ಳು ಕುಣಿತದ ತಂಡದಲ್ಲಿ ಸಾಮಾನ್ಯವಾಗಿ ನಾಲ್ಕು ಜನರಿರುತ್ತಾರೆ ಕೆಲವು ಬಾರಿ ಇಷ್ಟೆ ಜನರಿರಬೇಕು ಎಂಬ ನಿಯಮವಿಲ್ಲ.

# ಸಂಪಾದಕೀಯ

ಕರಾವಳಿ ತರಂಗಿಣಿ

## ಕೆಸರೊಳು ತಾವರೆ ಪುಟ್ಟಲು...

– ಲಲಿತಶ್ರೀ ಪ್ರೀತಮ್ ರೈ



ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯಬೇಡ" ಈ ನುಡಿಮುತ್ತುಗಳಲ್ಲಿ ಅದೆಂತಹ ಮಧುರಾಮೃತವಿದೆಯಲ್ಲವೇ? ಜಗದ ಜಂಜಾಟದಲ್ಲಿ ಸ್ವಾರ್ಥ ಲಾಲಸೆಗಳಲ್ಲಿ ಮನಸ್ಸು ಬೆಂಡಾಗಿ ಸಾಕೆನ್ನುವ ಸಮಯದಲ್ಲಿ ನಮ್ಮನ್ನು ಕಾಯುವವನೊಬ್ಬನಿದ್ದಾನೆ ಎಂದರೆ ಆ ಹೊತ್ತಿಗೆ ಮನಸ್ಸು ತುಂಬಿ ಬರದೇ ಇರಲು ಸಾಧ್ಯವೇ? ನಾನು ನಾನೆಂದು ಮೆರೆಯುವ ಜನರೆದುರು ನಾವು ನಾವಾಗಿಯೇ ಬದುಕಿ ತೋರಿಸಬೇಕೆಂಬ ಹಂಬಲವಿದ್ದರೂ, ಅದು ಸಾಧ್ಯವಾಗದೇ ಒದ್ದಾಡುವ ಜನರು ಅದೆಷ್ಟಿಲ್ಲ ಈ ಭೂಮಿಯಲ್ಲಿ. ಅಂತಹ ಜನರಿಗಾಗಿಯೇ ನಮ್ಮ ಹಿರಿಯರು ಇಂತಹ ನುಡಿ ಮುತ್ತುಗಳ ಮೂಲಕ ಸಂತೈಸಿರಬೇಕು. ನಾನು, ನನ್ನದು ಎಂಬ ಅಭಿಮಾನಕ್ಕೆ ಕಾರಣವಾದುದೇ ಅಹಂಕಾರ. ದೇಹವೇ ನಾನೆಂಬ ಭಾವ ಇರುವವರೆಗೆ ಈ ಅಹಂಕಾರವು ನಮ್ಮಲ್ಲಿ ಮನೆಮಾಡಿಕೊಂಡಿರುತ್ತದೆ. 'ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ' ಎಂದು ಬಸವಣ್ಣನವರು ಅಹಂಕಾರವನ್ನು 'ಮದವೇರಿದ ಆನೆ ಇದ್ದ ಹಾಗೆ' ಎನ್ನುತ್ತಾರೆ. ಅಹಂಕಾರದಲ್ಲಿ ಮೆರೆಯುವವರಿಗೆ ಎಂದೆಂದಿಗೂ ಮನ:ಶಾಂತಿ ಇರಲಾರದು. ತಾನು ಸುಖವಾಗಿ ಇರುವೆ ನೆಂದು ಈ ಜಗಕ್ಕೆ ಕೂಗಿ ಹೇಳಿದರೂ, ಅವರು ಎಂದೆಂದಿಗೂ ಮನಸ್ಸಿನಲ್ಲಿ ದ್ವೇಷ, ಅಸೂಯೆ ಎನ್ನುವ ಕಿಚ್ಚನ್ನು ಹೊತ್ತು ತಿರುಗುತಿರುತ್ತಾರೆ. ಅಂತವರು ಅವರದೇ ಒಡಲಲ್ಲಿ ಬಚ್ಚಿಟ್ಟಿರುವ ಕಿಚ್ಚಿನ ಬೇಗೆ ಯಲ್ಲಿ ಬೆಂದು ನೊಂದಿರುವುದಂತು ಖಂಡಿತ. ಆದರೂ ನಾನು ಎನ್ನುವ ಅಹಂಕಾರ ಅವರನ್ನು ಸರಿ ದಾರಿಯಲ್ಲಿ ನಡೆಯಲು ಬಿಡುವುದಿಲ್ಲ. "ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು. ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ ಸೀಮೆ ದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ' ಎಂಬ ಅಲ್ಲಮಪ್ರಭುವಿನ ವಚನದಲ್ಲಿ ನಾನೆಂಬ ಅಹಂಕಾರದ ಬಗ್ಗೆ ತುಂಬಾ ಚೆನ್ನಾಗಿ ತಿಳಿಸಿದ್ದಾರೆ. ಅಹಂಕಾರವುಳ್ಳವರು ಆಸೆ-ಆಮಿಷ, ಕಾಮ-ಕ್ರೋಧ ಮತ್ತು ಮದ-ಮತ್ಸರಗಳಿಗೆ ಬಲಿಯಾಗಿ ತಮ್ಮ ವಿವೇಕವನ್ನೇ ಕಳೆದುಕೊಳ್ಳುತ್ತಾರೆ. ಮಹಾನ್ ಜ್ಞಾನಿಗಳೇ ಅಹಂಕಾರದಿಂದ ಅಧಃಪತನ ಹೊಂದಿರುವಾಗ ಸಾಮಾನ್ಯರ ಪಾಡಂತೂ ಹೇಳತೀರದು. ಅಹಂಕಾರದಲ್ಲಿ ಮೆರೆದ ರಾಜ ಮಹಾರಾಜರೇ ಮಣ್ಣಲ್ಲಿ ಮಣ್ಣಾಗಿರುವುದನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ. ಇನ್ನು ಇನ್ನೊಬ್ಬರ ಬಗ್ಗೆ ಕಿಡಿಕಾರುತ್ತಾ, ಇನ್ನೊಬ್ಬರನ್ನು ಕೆಟ್ಟ ದೃಷ್ಟಿಯಲ್ಲೇ ನೋಡುವ ಈ ತೃಣ ಸಮಾನರಾದ ನಾವೆಲ್ಲಿ. ನಮ್ಮ ಅಮ್ಮ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು "ಮರದ ಹುಳು ಯಾವಾಗಲೂ ಹೇಗೆ ಮರವನ್ನೇ ತಿನ್ನುತ್ತದೋ ಹಾಗೇ ಮನುಷ್ಯನಲ್ಲಿರುವ ಮದ ಮತ್ಸರಗಳು ಅವರನ್ನೇ ಹಾಳು ಮಾಡುವುದರಲ್ಲಿ ಸಂದೇಹವಿಲ್ಲ" ಅಂತ. ಅಹಂಕಾರವು ಮನಸ್ಸನ್ನು ಆವರಿಸಿದಾಗ ಭಗವಂತನು ನಮ್ಮ ಮನಸಿನಿಂದ ನಮಗರಿವಿಲ್ಲದಂತೆ ದೂರ ಹೋಗುತ್ತಾನೆ. ಅಹಂಕಾರವಿಲ್ಲದ ಶುದ್ಧ ಮನಸ್ಸು ತಾನೆ ಶಿವಲಿಂಗವೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಅಂತಹ ಶುದ್ಧ ಮನಸ್ಸಿನಲ್ಲಿ ಮಾತ್ರ ಭಗವಂತನು ನೆಲೆಯಾಗುವುದಕ್ಕೆ ಸಾಧ್ಯ. ಆದ್ದರಿಂದಲೇ 'ಅಹಂಕಾರಿಯಾಗದೇ ಶರಣೆನ್ನು ಮನವೆ' ಎಂದು ಬಸವಣ್ಣನವರು ಮನಸ್ಸಿಗೆ ತಿಳಿ ಹೇಳುತ್ತಾರೆ. ಇನ್ನು ಜಾತಿ, ಆಸ್ತಿ, ಅಂತಸ್ತುಗಳೆಂದು ಮೆರೆಯುವ ನಾವು ಸಾಧಿಸಿದ್ದಾದರೂ ಏನನ್ನು? ದಿನವೆಲ್ಲಾ ಕೂಲಿ ಮಾಡಿ ದಣಿದು ಮಲಗುವ ಒಬ್ಬ ಕೂಲಿಯವನಿಗೆ ಬರುವ ನಿದ್ದೆಯ ಸುಖ, ಕೊಪ್ಪರಿಗೆ ಮೇಲೆ ಮಲಗುವ ಒಬ್ಬ ಶ್ರೀಮಂತನಿಗೆ ಸಿಗಲು ಸಾಧ್ಯವೇ? ಇನ್ನು ಜಾತಿ ಜಾತಿ ಎಂದು ಬಡಿದುಕೊಳ್ಳು ಈ ಸಮಾಜದಲ್ಲಿ ಒಂದೊಂದು ಜಾತಿಯವರ ದೇಹದಲ್ಲಿ ಒಂದೊಂದು ರೀತಿಯ ರಕ್ತದ ಕಣವಿರಲು ಸಾಧ್ಯವೇ? "ಕೆಸರೊಳು ತಾವರೆ ಪುಟ್ಟಲು, ಅದ ತಂದು ಬಿಸಜನಾಭನಿಗರ್ಪಿಸಲಿಲ್ಲವೇ? ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ವಸುಧೆಯೊಳಗೆ ಭೂಸುರರುಣಲಿಲ್ಲವೇ?"– ತಾವರೆ ಹೂವು ಹುಟ್ಟಿದ್ದು ಕೆಸರಲ್ಲಾದರೂ ದೇವರಿಗೆ ಮುಡಿಸುವುದಿಲ್ಲವೆ. ಹಸುವಿನ ಮಾಂಸದಿಂದಲೇ ಉತ್ಪತ್ತಿಯಾದ ಹಾಲನ್ನು ಅಮೃತಕ್ಕೆ ಸಮಾನವೆಂದು ಬಳಸುತ್ತಿಲ್ಲವೇ ಎಂದು ಕನಕದಾಸರು ಹೇಳುತ್ತಾರೆ. ಮನುಷ್ಯ ಈ ಲೋಕದಲ್ಲಿ ತಾನು ಕಂಡು, ಕೇಳಿ ಪಡೆದುಕೊಂಡಂತಹ ತಿಳುವಳಿಕೆಯ ಜೊತೆ ಜೊತೆಗೆ, ಮಾನವನ ಬದುಕಿನ ಆಗುಹೋಗುಗಳಿಗೆ ಕಾರಣವಾಗಿರುವ ವಾಸ್ತವದ ಸಂಗತಿಗಳನ್ನು ಅರಿತುಕೊಂಡು, ಒಳ್ಳೆಯ ನಡೆನುಡಿಗಳಿಂದ ಕೂಡಿದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಒಳ್ಳೆಯ ನಡೆ ನುಡಿಗಳು ಎಂದರೆ ತನಗೆ ತನ್ನವರಿಗೆ ಒಳಿತನ್ನು ಬಯಸುವಂತೆಯೇ ಜನಸಮುದಾಯಕ್ಕೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವಂತಹ ಸಾಮಾಜಿಕ ವರ್ತನೆ. ನಾನು ನನ್ನದೆಂಬ ಅಹಂಕಾರವನ್ನು ಬಿಟ್ಟು, ನಾವೆಲ್ಲರೂ ಒಂದೇ ಈ ಜಗದಲ್ಲಿ ಎನ್ನುವ ಸತ್ಯವನ್ನು ಅರಿತು ಬದುಕಿ ಮುಂದಿನ ಪೀಳಿಗೆಗೆ ದಾರಿ ದೀಪವಾಗವಾಗೋಣ...

# ವೈದ್ಯೋನಾರಾಯಣೋ ಹರೀಃ

## ಕವಟೆಕಾಯ್ಮರ



ಇದೊಂದು ಎಲೆಯುದುರುವ ಮರವಾಗಿದೆ. ಕಾಂಡದ ತೊಗಟೆಯು ಕಾರ್ಕಿಯ ಶಂಕುವಿನಾಕಾರದ ಮುಳ್ಳುಗಳನ್ನು ಹೊಂದಿದ್ದು ತೊಗಟೆ ಕಂದು ಬಣ್ಣದಲ್ಲಿರುತ್ತದೆ. ಎಲೆಯ ಕಿರು ಕೊಂಬೆಗಳು ದುಂಡಾಗಿದ್ದು, ವಾಯು ವಿನಿಮಯ ಬೆಂಡು ರಂಧ್ರಗಳ ಸಮೇತವಿದ್ದು ಮತ್ತು ರೋಮ ರಹಿತವಾಗಿರುತ್ತದೆ. ಇದರ ಬೀಜಗಳು ಗೋಳಾಕಾರಲ್ಲಿದ್ದು, ನಯವಾದ ನೀಲಿ ಕಂದು ಬಣ್ಣದಲ್ಲಿರುತ್ತದೆ. ಇದರ ಹಣ್ಣು ರುಚಿ ಮತ್ತು ಸುವಾಸನೆಯನ್ನು ಹೊಂದಿರುತ್ತದೆ. ಮರ ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಕೊಡಗಿನ ಜನರ ಆಹಾರದಲ್ಲಿ ಮಸಾಲೆಯಾಗಿ ಇದರ ತೊಗಟೆಯನ್ನು ಬಳಸಲಸುತ್ತಾರೆ. ಹಣ್ಣುಗಳು ಮತ್ತು ಚಿಗುರು ಎಲೆಗಳನ್ನು ಬೇಯಿಸಿ ತಿನ್ನಲಾಗುತ್ತದೆ. ಈ ಮರವು ಸುಣ್ಣ-ಮೆಣಸಿನ ಪರಿಮಳವನ್ನು ಹೊಂದಿರುತ್ತದೆ. ಹಣ್ಣುಗಳ ಸಿಪ್ಪೆ, ಬೀಜಗಳು, ಕಾಂಡಗಳ ತೊಗಟೆ ಮತ್ತು ಬೇರುಗಳು ಹಾಗೂ ಹಣ್ಣುಗಳಿಂದ ಪಡೆಯಲಾದ ಎಣ್ಣೆ ಯನ್ನು ಔಷಧೀಯ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಅಷ್ಟೇ ಅಲ್ಲದೆ ಔಷದೀಯ ಗುಣಗಳನ್ನು ಹೊಂದಿರುವ ಈ ಮರದ ಎಲ್ಲಾ ಭಾಗಗಳನ್ನು ಮನೆ ಮದ್ದಿನಲ್ಲಿ ಬಳಸಲಾಗುತ್ತದೆ.

ತೊಗಟೆಯ ಕಷಾಯವನ್ನು ಎದೆಯ ನೋವಿನ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.

ಹಣ್ಣುಗಳನ್ನು ಡಿಸ್ಪಿಪ್ಸಿಯಾ, ಆಸ್ತಮಾ ಮತ್ತು ಬ್ರಾಂಕೈಟಿಸ್, ಹೃದಯ ತೊಂದರೆಗಳು, ಹಲ್ಲು ನೋವು ಮತ್ತು ಸಂಧಿವಾತಗಳ ಚಿಕಿತ್ಸೆಗೆ ಬಳಸಲಾಗುತ್ತದೆ.

ಹೊಟ್ಟೆ ನೋವುಗಳಿಗೆ ಪರಿಹಾರವಾಗಿ ಬಾಹ್ಯವಾಗಿ ಬಳಸಲಾಗುತ್ತದೆ.

ಹಣ್ಣಿನ ಚರ್ಮಗಳು ಉತ್ತೇಜಕ ಮತ್ತು ಜೀರ್ಣಕಾರಿ ಗುಣಲಕ್ಷಣಗಳನ್ನು ಹೊಂದಿದೆ.

ಎದೆ ನೋವುಗಳಿಗೆ ಇದರ ಕಷಾಯವನ್ನು ಬಳಸಲಾಗುತ್ತದೆ.

ಗೋವಾದಲ್ಲಿ ಮೂತ್ರಪಿಂಡಗಳಿಗೆ ಶುದ್ಧೀಕರಿಸಲು ಮೂಲ ತೊಗಟೆಯನ್ನು ಬಳಸಲಾಗುತ್ತದೆ.

ಕಾಲರಾಗೆ ಅಗತ್ಯ ಎಣ್ಣೆ ಅಲ್ಲದೆ ನಂಜುನಿರೋಧಕ ಅಥವಾ ಸೊಂಕು ನಿವಾರಕವನ್ನಾಗಿ ಬಳಸಲಾಗುತ್ತದೆ.

ಅರುಣಾಚಲ ಪ್ರದೇಶದ ಕಣಿವೆಯ ಆದಿಬು ಡಕಟ್ಟುಗಳು ನರಹುಲಿ ಮತ್ತು ಕಾಮಾಲೆಗಳ ಚಿಕಿತ್ಸೆಗಾಗಿ ಬೇಯಿಸಿದ ಎಲೆಗಳನ್ನು ಬಳಸುತ್ತಾರೆ.

# ಕ್ಷೇತ್ರದರ್ಶನ

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿಯಲ್ಲಿರುವ ಮುತ್ತತ್ತಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಪ್ರಸಿದ್ದ ಯಾತ್ರಾ ಸ್ಥಳವಾಗಿದೆ. ಕಾವೇರಿ ನದಿಯ ಹರಿವಿನ ಸುಂದರ ಪ್ರಕೃತಿ ಸೌಂದರ್ಯದೊಂದಿಗೆ ಕಂಗೊಳಿಸುವ ಚಿಕ್ಕ ಗ್ರಾಮವೇ ಮುತ್ತತ್ತಿ. ರಮಣೀಯ ಕಣಿವೆ, ರಭಸದಿಂದ ಹರಿಯುವ ನೀರಿನ ಸೆಳವುಳ್ಳ ಸಣ್ಣ ಹಳ್ಳಗಳು ಇಲ್ಲಿವೆ. ಹಲವಾರು ಬಗೆಯ ಪ್ರಾಣಿ ಪಕ್ಷಿಗಳು ಈ ಅರಣ್ಯದಲ್ಲಿ ನೆಲೆಸಿವೆ. ಮುತ್ತತ್ತಿ ಪೌರಾಣಿಕ ಮಹಾಕಾವ್ಯವಾದ ರಾಮಾಯಣದಲ್ಲಿ ಬರುವ ಒಂದು ಪ್ರದೇಶವಾಗಿದೆ ಎಂಬ ಪ್ರತೀತಿ ಇದೆ. ಇಲ್ಲಿ ಪ್ರಸಿದ್ಧವಾದ ಹನುಮನ ಮಂದಿರವಿದ್ದು ಅದಕ್ಕೆ ಸ್ಥಳೀಯರು ಹನುಮಂತರಾಯ ಅಥವಾ ಮುತ್ತೆತ್ತರಾಯ ದೇವಸ್ಥಾನವೆಂದು ಕರೆಯುತ್ತಾರೆ. ಶ್ರೀ ಆಂಜನೇಯಸ್ವಾಮಿ ಮೂರ್ತಿಯು ಮುತ್ತತ್ತಿಯಲ್ಲಿ ಭೂಮಿಯಿಂದ ಮೂಡಿದ್ದು ಸದರಿ ಜಾಗದಲ್ಲಿ ಮೂಡಿರುವ ಮೂರ್ತಿಯನ್ನು ಭೂಮಿಯಲ್ಲೇ ಹೂತು ಹನುಮಂತನ ವಿಗ್ರಹವನ್ನು ಕೆತ್ತಿಸಿ




ಮುತ್ತೆತ್ತರಾಯ

ಪ್ರತಿಷ್ಠಾಪನೆ ಮಾಡಿ ಆ ಜಾಗದಲ್ಲಿ ದೇವಸ್ಥಾನವನ್ನು 1986–87ನೇ ಸಾಲಿನಲ್ಲಿ ಭಕ್ತಾಧಿಗಳ ವಂತಿಕೆಯಿಂದ ಹಣ ಕ್ರೋಢೀಕರಿಸಿ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಪುರಾಣದ ಹಿನ್ನೆಲೆಯ ಪ್ರಕಾರ ರಾಮಾಯಣದ ಕಾಲದಲ್ಲಿ ಶ್ರೀರಾಮಚಂದ್ರಪ್ರಭು ಲಂಕಾಧಿಪತಿ ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಕಟ್ಟಿ, ಶ್ರೀ ರಾಮಚಂದ್ರ, ಸೀತಾಮಾತೆ, ಲಕ್ಷ್ಮಣ ಮತ್ತು ಆಂಜನೇಯರ ಸಮೇತ ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗಿ ಹೋಗುವಾಗ ಬಸವನ ಬೆಟ್ಟ ಅರಣ್ಯ ಪ್ರದೇಶದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಒಂದು ದಿನ ಇಲ್ಲೇ ತಂಗಿ ಹೋಗಲು ನಿರ್ಧರಿಸುತ್ತಾರೆ ಮರುದಿನ ಬೆಳಗ್ಗೆ ಕಾವೇರಿ ನದಿ ತೀರದಲ್ಲಿರುವ ಈಗಿನ ತಿರುಗಣೆ ಮಡುವಿನಲ್ಲಿ ಕುಳಿತು ತಾಯಿ ಸೀತಾದೇವಿ ಸ್ನಾನ ಮಾಡುತ್ತಿದ್ದಾಗ ಸೀತಾಮಾತೆಯ ಮುತ್ತಿನ ಮೂಗುತಿಯು ಕಾವೇರಿ ನದಿಯಲ್ಲಿ ಬಿದ್ದು ಹೋಗಿರುವುದಾಗಿ ತನ್ನ ಪತಿಯಾದ ಶ್ರೀ ರಾಮರಿಗೆ ಹೇಳಿದಾಗ ಅಲ್ಲೇ ಇದ್ದ ಹನುಮಂತನಿಗೆ ನೀರಿನಲ್ಲಿದ್ದ ಮೂಗುತಿಯನ್ನು ಹುಡುಕಲು ಶ್ರೀ ರಾಮಚಂದ್ರ ಪ್ರಭು ಹೇಳುತ್ತಾರೆ ಅವರ ಆಜ್ಞೆಯಂತೆ ಆಂಜನೇಯಸ್ವಾಮಿ ಅವರು ತನ್ನ ಬಾಲವನ್ನು ನೀರಿನಲ್ಲಿ ತಿರುಗಿಸಿ ನೀರಿನಲ್ಲಿ ಕಳೆದುಹೋಗಿದ್ದ ಮುತ್ತಿನ ಮೂಗುತಿ ಕಾಣಿಸಿದಾಗ ಮೂಗುತಿಯನ್ನು ತೆಗೆದು ಸೀತಾಮಾತೆಗೆ ನೀಡಿದನು. ಹನುಮಂತ ಬಾಲವನ್ನು ನೀರಿನಲ್ಲಿ ತಿರುಗಿಸಿದ ರಭಸಕ್ಕೆ ಆ ಜಾಗದಲ್ಲಿ ಇಂದಿಗೂ ಕಾವೇರಿ ನದಿಯ ನೀರು ಒಂದು ಸುತ್ತು ತಿರುಗಿ ಹೋಗುತ್ತದೆ. ಆದ ಕಾರಣ ಆ ಸ್ಥಳಕ್ಕೆ ತಿರುಗಣೆಮಡು ಎಂದು ಕರೆದು ಪ್ರಸಿದ್ದಿಯಾಗಿದೆ. ಹನುಮಂತನು ಸೀತಾಮಾತೆಗೆ ಮುತ್ತಿನ ಮೂಗುತಿಯನ್ನು ತನ್ನ ಬಾಲದಲ್ಲಿ ತೆಗೆದು ಕೊಟ್ಟಿರುವುದಕ್ಕೆ ತಾಯಿ ಸೀತಾದೇವಿ ಆಂಜನೇಯಸ್ವಾಮಿಯನ್ನು ಮುತ್ತೆತ್ತರಾಯನೆಂದು ಹೆಸರು ಕರೆದರು. ಹಾಗೆ ಆಂಜನೇಯಸ್ವಾಮಿಯನ್ನು ಈ ಕ್ಷೇತ್ರದಲ್ಲಿ ಮುತ್ತೆತ್ತರಾಯಸ್ವಾಮಿಯಾಗಿ ನೆಲೆಸು ಎಂದು ಹಾರೈಸುತ್ತಾರೆ. ಈಗ ಕ್ಷೇತ್ರವನ್ನು ಮುತ್ತತ್ತಿ ಎಂದು ಕರೆಯಲಾಗುತ್ತದೆ. ಶ್ರಾವಣ ಮಾಸದಲ್ಲಿ ನಡೆಯುವ ಮುತ್ತೆತ್ತರಾಯನ ಜಾತ್ರೆಯಲ್ಲಿ ಭಕ್ತರು ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಗುವಾಹಟಿಯಿಂದ ಈಶಾನ್ಯಕ್ಕೆ ಸುಮಾರು 250 ಕಿಲೋಮೀಟರ್ ದೂರದಲ್ಲಿರುವ ಮಜುಲಿಯು ಭಾರತದ ಅಸ್ಸಾಂನಲ್ಲಿರುವ ಒಂದು ದೊಡ್ಡ ನದಿ ದ್ವೀಪವಾಗಿದ್ದು, ಇದು ದಕ್ಷಿಣ ಮತ್ತು ಪೂರ್ವಕ್ಕೆ ಬ್ರಹ್ಮಪುತ್ರ ನದಿ, ಪಶ್ಚಿಮಕ್ಕೆ ಸುಬನ್ಸಿರಿ ನದಿ ಮತ್ತು ಉತ್ತರಕ್ಕೆ ಖೆರ್ಕುಟಿಯಾ ಕ್ಸುತಿ ಎಂಬ ಬ್ರಹ್ಮಪುತ್ರ ನದಿಯ ಅನಾಬ್ರಂಚ್‌ನಿಂದ ರೂಪುಗೊಂಡಿದೆ. ಈ ದ್ವೀಪದಲ್ಲಿ ಮಿಸಿಂಗ್, ದಿಯೋರಿ ಮತ್ತು ಸೋನೋವಾಲ್ ಕಚ್ರಿ ಬುಡಕಟ್ಟು ಜನಾಂಗದವರು ನೆಲೆಸಿದ್ದಾರೆ. ಇದು ಅಸ್ಸಾಮಿ ನವ- ವೈಷ್ಣವ ಸಂಸ್ಕೃತಿಯ ಕೇಂದ್ರವಾಗಿದೆ. ಇದು 2016ರಲ್ಲಿ ಸರ್ಕಾರಿ ಜಿಲ್ಲೆಯಾದ ದೇಶದ ಮೊದಲ ದ್ವೀಪವಾಗಿದೆ. 2004 ರಿಂದ ಮಜುಲಿ ವಿಶ್ವ ಪರಂಪರೆಯ ತಾಣವಾಗಿ ನಾಮನಿರ್ದೇಶನಕ್ಕಾಗಿ UNESCO ತಾತ್ಕಾಲಿಕ ಪಟ್ಟಿಯಲ್ಲಿದೆ. ಈ ದ್ವೀಪವು ಉದ್ದವಾದ ಮತ್ತು ತೆಳ್ಳಗಿನ ಭೂಮಿಯಾಗಿದ್ದು, ಎರಡು ಸಮಾನಾಂತರ ನದಿಗಳ ನಡುವೆ ಇದೆ, ಉತ್ತರಕ್ಕೆ ಬ್ರಹ್ಮಪುತ್ರ ಮತ್ತು ದಕ್ಷಿಣಕ್ಕೆ ಬುರ್ಹಿಡಿಹಿಂಗ್‌ಗಳು ಲಖು ಎಂಬ ಸ್ಥಳದಲ್ಲಿ ಸೇರುತ್ತಾರೆ. ಮೂಲತಃ ಇದು ರತ್ನಪುರ ಎಂಬ ಹೆಸರನ್ನು ಹೊಂದಿದ್ದು, ಸೂತಿಯ ಸಾಮ್ರಾಜ್ಯದ ರಾಜಧಾನಿಯಾಗಿ ಸೇವೆ ಸಲ್ಲಿಸಿತ್ತು. 17 ನೇ ಶತಮಾನದಲ್ಲಿ ಭಾರಿ ಭೂಕಂಪಗಳ ಸರಣಿಯಾಗಿ ಈ ಪ್ರದೇಶವನ್ನು ಪ್ರದೇಶವನ್ನು ಮರುರೂಪಿಸಿತು. ಈ ಪ್ರವಾಹವು ಬ್ರಹ್ಮಪುತ್ರದ ಮಾರ್ಗವನ್ನು ಬದಲಿಸಲು ಕಾರಣವಾಯಿತು. ಇದರ ಪರಿಣಾಮವಾಗಿ ಮಜುಲಿ ದ್ವೀಪದ ರಚನೆಯಾಗಿದೆ. ಮಜುಲಿಯು 16 ನೇ ಶತಮಾನದಿಂದಲೂ ಅಸ್ಸಾಮಿ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರವಾಗಿದೆ. ಇದು 16 ನೇ ಶತಮಾನದ ಸಮಾಜ ಸುಧಾರಕ ಶ್ರೀಮಂತ ಶಂಕರದೇವ ಅವರ ಭೇಟಿಯೊಂದಿಗೆ ಸಂಪರ್ಕ ಹೊಂದಿದೆ. ನವ-ವೈಷ್ಣವ ಚಳುವಳಿಯ ಪ್ರವರ್ತಕರಾದ ಶಂಕರದೇವ ಅವರು ವೈಷ್ಣವ ಧರ್ಮವನ್ನು ಬೋಧಿಸಿದರು ಮತ್ತು ದ್ವೀಪದಲ್ಲಿ ಸತ್ರಸ್ ಎಂಬ ಮಠಗಳನ್ನು ಸ್ಥಾಪಿಸಿದರು. ಸತ್ರಗಳ ಸ್ಥಾಪನೆಯೊಂದಿಗೆ ಮಜುಲಿ ವೈಷ್ಣವರ ಪ್ರಮುಖ ಕೇಂದ್ರವಾಯಿತು. ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆಯುವವರೆಗೂ ಇದು ಬ್ರಿಟಿಷ್ ಆಳ್ವಿಕೆಯಲ್ಲಿತ್ತು. ಕಳೆದ 200 ವರ್ಷಗಳಲ್ಲಿ ಮಜುಲಿ ಅದರ ಸುತ್ತಲಿನ ನದಿ ಬೆಳೆದಂತೆ ಗಾತ್ರದಲ್ಲಿ ಕುಗ್ಗಿದೆ.




ಮಜುಲಿಯ ಜನಸಂಖ್ಯೆಯಲ್ಲಿ ಅರುಣಾಚಲ ಪ್ರದೇಶದಿಂದ ಶತಮಾನಗಳ ಹಿಂದೆ ಮಜುಲಿಗೆ ವಲಸೆ ಬಂದ ಮಿಸಿಂಗ್, ದಿಯೊರಿ, ಕೈಬರ್ಟಾ ಮತ್ತು ಸೊನೊವಾಲ್ ಕಚಾರಿ ಬುಡಕಟ್ಟು ಜನಾಂಗದವರನ್ನು ಸ್ಥಳೀಯ ಸಮುದಾಯಗಳು ಒಳಗೊಂಡಿವೆ. ಹಿಂದೂ ಅಸ್ಸಾಮಿ ಸಮುದಾಯಗಳಲ್ಲಿ ಕೋಚ್, ಕಲಿತಾ, ಅಹೋಮ್, ಸುತಿಯಾ ಮತ್ತು ಜೋಗಿ ಸೇರಿವೆ. ಇಲ್ಲಿನ ಭಾಷೆ ಅಸ್ಸಾಮಿ ಮತ್ತು ದಿಯೋರಿ. ದ್ವೀಪವು 144 ಹಳ್ಳಿಗಳನ್ನು ಹೊಂದಿದ್ದು, 150,000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಫೆಬ್ರವರಿ ಮಧ್ಯದಲ್ಲಿ ಐದು ದಿನಗಳ ಕಾಲ ಆಚರಿಸಲಾಗುವ ಅಲಿ ಆಯ್ ಲಿಗಾಂಗ್ ಹಬ್ಬವು ಎರಡನೇ ಬುಧವಾರದಂದು ಆರಂಭಗೊಂಡು ಫಾಲ್ಗುನ್ ತಿಂಗಳ ಮೊದಲ ಬುಧವಾರದಂದು ಕೊನೆಗೊಳ್ಳುವ ಭವ್ಯವಾದ ಕಾರ್ಯಕ್ರಮವಾಗಿದೆ. ಪುರಂಗ್ ಅಪಿನ್ ಅಂದರೆ ಪ್ಯಾಕ್ ಮಾಡಿದ ಬೇಯಿಸಿದ ಅನ್ನ, ಅಪಾಂಗ್ ಅಂದರೆ ಅಕ್ಕಿ ಬಿಯರ್, ಮತ್ತು ವಿವಿಧ ಹಂದಿಮಾಂಸ, ಮೀನು ಮತ್ತು ಕೋಳಿ ಭಕ್ಷ್ಯಗಳಂತಹ ಸ್ಥಳೀಯ ಭಕ್ಷ್ಯಗಳನ್ನು ನೀಡಲಾಗುತ್ತದೆ. ಗುಮ್ರಾಗ್ ಸೋಮನ್ ಎಂಬ ಸಾಂಪ್ರದಾಯಿಕ ಮಿಸಿಂಗ್ ನೃತ್ಯವನ್ನು ಪ್ರತಿ ಹಳ್ಳಿಯಲ್ಲಿ ಉತ್ತಮ ಫಸಲಿಗಾಗಿ ದೋನಿ ಪೊಲೊ ಪೂಜಿಸಲಾಗುತ್ತದೆ. ಕಳೆದ ಅರ್ಧ ಸಹಸ್ರಮಾನದಿಂದ ಮಜುಲಿಯು ಅಸ್ಸಾಮಿ ನಾಗರಿಕತೆಯ ಸಾಂಸ್ಕೃತಿಕ ಕೇಂದ್ರ ಮತ್ತು ತೊಟ್ಟಿಲು. ಆಯುಧಗಳು, ಪಾತ್ರೆಗಳು, ಆಭರಣಗಳು ಮತ್ತು ಸಾಂಸ್ಕೃತಿಕವಾಗಿ ಮಹತ್ವದ ವಸ್ತುಗಳಂತಹ ಪ್ರಾಚೀನ ಕಲಾಕೃತಿಗಳನ್ನು ಸತ್ರಗಳು ರಕ್ಷಿಸುತ್ತವೆ. ಪ್ರಾಚೀನ ಹರಪ್ಪನ್ ನಾಗರಿಕತೆಯ ವಿಧಾನಗಳನ್ನು ಅನುಸರಿಸಿ ಸಾಂಪ್ರದಾಯಿಕ ಕುಂಬಾರಿಕೆಯನ್ನು ಮಾಡಲಾಗುತ್ತದೆ. ಈ ಬುಡಕಟ್ಟು ಜನಾಂಗದವರ ಕೈಮಗ್ಗದ ಕೆಲಸವು ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದಿದೆ. ಕೃಷ್ಣನ ಜೀವನವನ್ನು ಚಿತ್ರಿಸುವ ಮೂರು ದಿನಗಳ ಕಾಲ ನಡೆಯುವ ರಾಸ ಮಹೋತ್ಸವ ಉತ್ಸವವು ದ್ವೀಪದಲ್ಲಿರುವ ಪ್ರತಿಯೊಬ್ಬರನ್ನು ಒಳಗೊಂಡಿರುತ್ತದೆ. ದೂರದ ಜನರು, ಅನಿವಾಸಿಗಳು ಸಹ ಆಚರಿಸಲು ಬರುತ್ತಾರೆ. ಸತ್ರಗಳು ವಿವಿಧ ಕಲೆ ಮತ್ತು ಕರಕುಶಲ ಸಂಪ್ರದಾಯಗಳನ್ನು ಕರಗತ ಮಾಡಿಕೊಂಡಿವೆ. ಮುಜುಲಿಯಲ್ಲಿ ಅಕ್ಕಿ ಮುಖ್ಯ ಬೆಳೆ. ಮಜುಲಿಯು ಶ್ರೀಮಂತ ಮತ್ತು ವೈವಿಧ್ಯಮಯ ಕೃಷಿ ಸಂಪ್ರದಾಯವನ್ನು ಹೊಂದಿದೆ. ಸುಮಾರು 100 ವಿಧದ ಭತ್ತವನ್ನು ಬೆಳೆಯಲಾಗುತ್ತದೆ. ಕೃಷಿಯ ನಂತರ ಮೀನುಗಾರಿಕೆಯೂ ಪ್ರಮುಖ ಉದ್ಯಮವಾಗಿದೆ. ಉತ್ಪಾದಿಸಿದ ಅಕ್ಕಿಯ ಆಕರ್ಷಕ ಶ್ರೇಣಿಗಳಲ್ಲಿ ಕೋಮಲ್ ಸೌಲ್ ಒಂದು ವಿಶಿಷ್ಟ ವಿಧವಾಗಿದ್ದು, ಧಾನ್ಯಗಳನ್ನು 15 ನಿಮಿಷಗಳ ಕಾಲ ಬೆಚ್ಚಗಿನ ನೀರಿನಲ್ಲಿ ಮುಳುಗಿಸಿದ ನಂತರ ತಿನ್ನಬಹುದು ಮತ್ತು ಸಾಮಾನ್ಯವಾಗಿ ಉಪಹಾರ ಧಾನ್ಯವಾಗಿ ತಿನ್ನಬಹುದು. ಬಾವೊಧನ್, ಇದು ನೀರಿನ ಅಡಿಯಲ್ಲಿ ಬೆಳೆಯುತ್ತದೆ ಮತ್ತು ಹತ್ತು ತಿಂಗಳ ನಂತರ ಕೊಯ್ಲು ಮಾಡಲಾಗುತ್ತದೆ. ಮೀನಿನೊಂದಿಗೆ ಸಾಂಪ್ರದಾಯಿಕ ಕೇಕ್ ಮಾಡಲು ಬಳಸುವ ಜಿಗುಟಾದ ಕಂದು ಅಕ್ಕಿಯನ್ನು ಪಿತಾ ಎಂದು ಕರೆಯಲಾಗುತ್ತದೆ. ದ್ವೀಪದ ದಕ್ಷಿಣ ಭಾಗವು ಪಕ್ಷಿ ಪ್ರೇಮಿಗಳ ಸ್ವರ್ಗವಾಗಿದೆ. ಹವಾಮಾನ ಮತ್ತು ವನ್ಯಜೀವಿ ವೀಕ್ಷಣೆಯು ತೃಪ್ತಿಕರವಾಗಿರುವುದರಿಂದ ನವೆಂಬರ್ ಮತ್ತು ಮಾರ್ಚ್ ನಡುವೆ ಭೇಟಿ ಉತ್ತಮ. **ಮುಂದುವರೆಯುವುದು...**

# ಕಲ್ಪವೃಕ್ಷ

@ಪ್ರೀತಂ ರೈ ಇ

## ಲಾನ್ಸ್ ನಾಯಕ್ ಲಖಾ ಸಿಂಗ್

1965 ರ ಇಂಡೋ-ಪಾಕ್ ಯುದ್ಧದ ಸಮಯದಲ್ಲಿ, 68 ಪದಾತಿ ದಳದ ಅಡಿಯಲ್ಲಿ J&K ನ URI ಸೆಕ್ಟರ್‌ನಲ್ಲಿ ಲಾನ್ಸ್ ನಾಯಕ್ ಲಖಾ ಸಿಂಗ್ ಅವರ ಘಟಕವನ್ನು ಕದನ-ವಿರಾಮ ರೇಖೆ ಉದ್ದಕ್ಕೂ ನಿಯೋಜಿಸಲಾಯಿತು. 1965 ರ ಆರಂಭದಿಂದಲೂ ಕದನ ವಿರಾಮ ರೇಖೆಯಲ್ಲಿ ಪಾಕಿಸ್ತಾನಿ ಪಡೆಗಳು ಭಾರತದ ಸರಬರಾಜು ಬೆಂಗಾವಲು ಪಡೆಗಳ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದವು. 1995 ರ ಆಗಸ್ಟ್ 1 ನೇ ವಾರದಲ್ಲಿ ನಿಧಾನವಾಗಿ ಗಡಿಯಾಚೆಯಿಂದ ಒಳನುಸುಳುವಿಕೆ ಹೆಚ್ಚಾಯಿತು, ಅವರ "ಆಪರೇಷನ್ ಜಿಬ್ರಾಲ್ಟರ್"ನ ಭಾಗವಾಗಿ ಪಾಕಿಸ್ತಾನದ ಗೊರಿಲ್ಲಾ ಪಡೆಗಳು ವ್ಯಾಪಕ ಗೊಂದಲಗಳನ್ನು ಸೃಷ್ಟಿಸಲು ಕಾಶ್ಮೀರ ಕಣಿವೆಯನ್ನು ಪ್ರವೇಶಿಸಿದವು. ಪಾಕಿಸ್ತಾನದ ಒಳಗೆ CFL ನಿಂದ 8 ಕಿಮೀ ದೂರದಲ್ಲಿರುವ ಹಾಜಿ-ಪಿರ್ ಪಾಸ್ ಒಳನುಸುಳುವಿಕೆಯ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಭಾರತೀಯ ಸೇನೆಯು ಒಳನುಸುಳುವಿಕೆ ಮಾರ್ಗವನ್ನು ಪ್ಲಗ್ ಮಾಡಲು ಹಾಜಿ-ಪಿರ್ ಪಾಸ್ ಅನ್ನು ವಶಪಡಿಸಿಕೊಳ್ಳಲು ನಿರ್ಧರಿಸಿತು. ಹಾಜಿ-ಪೀರ್ ಮೇಲೆ ದಾಳಿ ಮಾಡುವ ಮತ್ತು ಆಕ್ರಮಿಸಿಕೊಳ್ಳುವ ಕಾರ್ಯಾಚರಣೆಯನ್ನು "ಆಪ್ ಬಕ್ಷಿ" ಎಂದು ಕರೆಯಲಾಯಿತು, ಇದನ್ನು 69 ಪದಾತಿ ದಳದ ಬ್ರಿಗೇಡ್ ಕಮಾಂಡರ್ ಬ್ರಿಗೇಡಿಯರ್ ಜೋರಾವರ್ ಚಂದ್ ಬಕ್ಷಿ ಅವರ ಹೆಸರನ್ನು ಇಡಲಾಗಿದೆ. ಹಾಜಿ-ಪಿರ್ ಪಾಸ್ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಎರಡು ಸಾಲುಗಳಿಂದ ಸುತ್ತುವರಿದಿದೆ. ಕಾರ್ಯಾಚರಣೆಯ ಯೋಜನೆಯು ಮೊದಲು ಪಾಸ್‌ನ ಭುಜಗಳನ್ನು ಆಕ್ರಮಿಸಿಕೊಳ್ಳುವುದು ಮತ್ತು ನಂತರ ಪಾಸ್ ಅನ್ನು ಜಯಿಸಲು




ಚಲಿಸುವುದು. 19 ಈಸ್ಟರ್ನ್ ರಿಡ್ಜ್ ಅನ್ನು ವಶಪಡಿಸಿಕೊಳ್ಳುವ ಜವಾಬ್ದಾರಿಯನ್ನು ಪಂಜಾಬ್‌ಗೆ ನೀಡಲಾಯಿತು. ಈಸ್ಟರ್ನ್ ರಿಡ್ಜ್‌ಗಾಗಿ ನಡೆದ ಯುದ್ಧದ ಸಮಯದಲ್ಲಿ, 19 ಪಂಜಾಬ್ ಬೆಟಾಲಿಯನ್‌ನ ಚಾರ್ಲಿ ಫ್ಲೈಟ್ ಮೇಜರ್ ಪರ್ಮಿಂದರ್ ಸಿಂಗ್ ನೇತೃತ್ವದಲ್ಲಿ ಪಾಯಿಂಟ್ 877 ಅನ್ನು ವಶಪಡಿಸಿಕೊಳ್ಳಲು ವಹಿಸಲಾಯಿತು. ಲಾನ್ಸ್ ನಾಯಕ್ ಲಖಾ ಸಿಂಗ್ ಅವರು ಈ ಕಾರ್ಯಾಚರಣೆಗೆ ನಿಯೋಜಿಸಲಾದ ಅ Coyನ ಭಾಗವಾಗಿದ್ದರು. ದಾಳಿಯು ಪ್ರಗತಿಯಲ್ಲಿದ್ದಂತೆ, ಲಾನ್ಸ್ ನಾಯಕ್ ಲಖಾ ಸಿಂಗ್ ಮದ್ದುಗುಂಡುಗಳು ಮುಗಿದುವು. ಆದರೆ ದೊಡ್ಡ ಧೈರ್ಯವನ್ನು ಪ್ರದರ್ಶಿಸಿದ ಲಖಾ ಸಿಂಗ್ ಶತ್ರು ಸೈನಿಕರನ್ನು ಕೊಲ್ಲಲು ತನ್ನ ಬಯೋನೆಟ್ ಬಳಸಿ ಮುಂದುವರೆಸಿದರು. ಬಯೋನೆಟ್ ಕೂಡ ಮುರಿದಾಗ, ಲಖಾ ಸಿಂಗ್ ಶೌರ್ಯದ ಅಪರೂಪದ ಪ್ರದರ್ಶನದಲ್ಲಿ ತನ್ನ ಹೆಲ್ಮೆಟ್ ಅನ್ನು ತೆಗೆದು ಶತ್ರು ಸೈನಿಕರನ್ನು ಹೊಡೆದುರುಳಿಸಲು ಪ್ರಾರಂಭಿಸಿದರು. ಆದಾಗ್ಯೂ, ಅವರು ಶತ್ರುಗಳ ಫಿರಂಗಿಯ ಸ್ಫೋಟವನ್ನು ಪಡೆದರು ಮತ್ತು ಹುತಾತ್ಮರಾದರು. ಲಖಾ ಸಿಂಗ್ ಅವರು ದೇಶ ಸೇವೆಯಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ವೀರ ಸೈನಿಕ. ಅವರ ಅತ್ಯುತ್ತಮ ಧೈರ್ಯ, ಹೋರಾಟದ ಮನೋಭಾವ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ ಅವರಿಗೆ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಅವರು ಪತ್ನಿ ಶ್ರೀಮತಿ ಸೀತಾನ್ ದೇವಿ ಅವರನ್ನು ಅಗಲಿದ್ದಾರೆ. ಲ್ಯಾನ್ಸ್ ನಾಯಕ್ ಲಖಾ ಸಿಂಗ್ ಅವರು 2 ನೇ ಫೆಬ್ರವರಿ 1933 ರಂದು ಹಿಮಾಚಲ ಪ್ರದೇಶದ ಕಂಗ್ರಾ ಜಿಲ್ಲೆಯ ಬಲಹ್ರಾ ಮರಿಯಾ ಗ್ರಾಮದಲ್ಲಿ ಶ್ರೀ ಫನಾ ರಾಮ್ ಅವರ ಪುತ್ರನಾಗಿ ಜನಿಸಿದರು. ಲಖಾ ಸಿಂಗ್ ಅವರು 22 ನೇ ವಯಸ್ಸಿನಲ್ಲಿ 22 ನೇ ವಯಸ್ಸಿನಲ್ಲಿ 1956 ರ ಜನವರಿ 9 ರಂದು ಸೈನ್ಯಕ್ಕೆ ಸೇರಿದರು. ಅವರು ಪಂಜಾಬ್ ರೆಜಿಮೆಂಟ್‌ನ 19 ಪಂಜಾಬ್ ಬಿಎನ್‌ಗೆ ನೇಮಕಗೊಂಡರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದೆ.

# ಪಾರಿಜಾತ

## ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಸಾದನೆಯ ಮೆಟ್ಟಿಲನ್ನು ಮೆಟ್ಟುವುದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಎಷ್ಟೇ ಕಷ್ಟ ಬಂದರೂ ತನ್ನ ಸಾಧನೆಯ ಗುರಿಯನ್ನು ತಲುಪಿ ಉಳಿದ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾರೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಅತಿಥಿ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಕರ್ಣಂ ಮಲ್ಲೇಶ್ವರಿ. ಇವರು 1 ಜೂನ್ 1975ರಲ್ಲಿ ಆಂಧ್ರಪ್ರದೇಶದ ಕುಗ್ರಾಮವಾದ ಅಮದಾಲವಲಸ ಬಳಿಯ ವೂಸವಾನಿಪೇಟಾದಲ್ಲಿ ಕರ್ಣಂ ಕುಟುಂಬದಲ್ಲಿ ಜನಿಸಿದರು. ಇವರಿಗೆ ನಾಲ್ಕು ಸಹೋದರಿಯರಿದ್ದಾರೆ. ಮಲ್ಲೇಶ್ವರಿ ಅವರು 12ನೇ ವಯಸ್ಸಿನಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ತರಬೇತುದಾರ ನೀಲಂಶೆಟ್ಟಿ ಅಪ್ಪಣ್ಣ ಅವರಲ್ಲಿ ತರಬೇತಿ ಪಡೆದರು. ಸಹೋದರಿ ಮದುವೆಯಾಗಿ ದೆಹಲಿಯಲ್ಲಿ ವಾಸಿಸುತ್ತಿದ್ದರಿಂದ ಮಲ್ಲೇಶ್ವರಿ ಅವರು ಉತ್ತಮ ತರಬೇತಿಗಾಗಿ ದೆಹಲಿ ನಗರಕ್ಕೆ ತೆರಳಿದರು. ಅಲ್ಲಿ ಇವರಿಗೆ ಉತ್ತಮ ಕ್ರೀಡಾಪಟುವಾಗಲು ಸಾಮರ್ಥ್ಯವಿದೆ ಎಂದು ಸ್ಪಷ್ಟವಾಯಿತು. ಆಕೆಯ ಪ್ರತಿಭೆಯನ್ನು ಶೀಘ್ರದಲ್ಲೇ ಭಾರತೀಯ ಕ್ರೀಡಾ ಪ್ರಾಧಿಕಾರ ಗುರುತಿಸಿತು. 1990 ರಲ್ಲಿ ಮಲ್ಲೇಶ್ವರಿಯವರನ್ನು ರಾಷ್ಟ್ರೀಯ ಶಿಬಿರಕ್ಕೆ ಸೇರಿಕೊಂಡರು. ನಾಲ್ಕು ವರ್ಷಗಳ ನಂತರ, ಅವರು 54-ಕೆಜಿ ವೇಟ್-ಲಿಫ್ಟಿಂಗ್ ವಿಶ್ವ ಚಾಂಪಿಯನ್‌ಶಿಪ್ ವಿಜೇತರಾದರು. ಮಲ್ಲೇಶ್ವರಿ 1994 ಮತ್ತು 1995 ರಲ್ಲಿ 54 ಕೆಜಿ ವಿಭಾಗದಲ್ಲಿ ವಿಶ್ವ ಪ್ರಶಸ್ತಿಯನ್ನು ಗೆದ್ದರು. 1993 ಮತ್ತು 1996 ರಲ್ಲಿ ಮೂರನೇ ಸ್ಥಾನ ಪಡೆದರು. 1994 ರಲ್ಲಿ, ಅವರು ಇಸ್ತಾನ್‌ಬುಲ್‌ನಲ್ಲಿ ನಡೆದ ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಬೆಳ್ಳಿ ಗೆದ್ದರು ಮತ್ತು 1995 ರಲ್ಲಿ ಅವರು 54 ಕೆಜಿ ವಿಭಾಗದಲ್ಲಿ ಕೊರಿಯಾದಲ್ಲಿ ನಡೆದ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂ




ಪಿಯನ್ ಶಿಪ್‌ಗಳನ್ನು ಗೆದ್ದರು. ಆ ವರ್ಷ, ಅವರು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ದಾಖಲೆಯ 113 ಕೆಜಿ ಎತ್ತುವ ಮೂಲಕ ಚೀನಾದಲ್ಲಿ ಪ್ರಶಸ್ತಿಯನ್ನು ಗೆದ್ದರು. ತನ್ನ ಒಲಂಪಿಕ್ ಗೆಲುವಿಗೆ ಮುಂಚೆಯೇ, ಮಲ್ಲೇಶ್ವರಿ 11 ಚಿನ್ನದ ಪದಕಗಳನ್ನು ಒಳಗೊಂಡಂತೆ 29 ಅಂತರಾಷ್ಟ್ರೀಯ ಪದಕಗಳೊಂದಿಗೆ ಎರಡು ಬಾರಿ ವೇಟ್ ಲಿಫ್ಟಿಂಗ್ ವಿಶ್ವ ಚಾಂಪಿಯನ್ ಆಗಿದ್ದರು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪದಕಗಳ ಜೊತೆಗೆ, ಮಲ್ಲೇಶ್ವರಿಗೆ 1994 ರಲ್ಲಿ ಅರ್ಜುನ ಪ್ರಶಸ್ತಿ , 1999 ರಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ, ಮತ್ತು 1999ರಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದರು. 2000 ರ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಮಲ್ಲೇಶ್ವರಿ "ಸ್ನ್ಯಾಚ್"ನಲ್ಲಿ 110 ಕೆಜಿ ಮತ್ತು "ಕ್ಲೀನ್ ಮತ್ತು ಜರ್ಕ್" ವಿಭಾಗದಲ್ಲಿ 130 ಕೆಜಿ ಒಟ್ಟು 240 ಕೆಜಿ ಎತ್ತಿ, ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. 1997 ರಲ್ಲಿ, ಮಲ್ಲೇಶ್ವರಿಯವರು ತನ್ನ ಸಹ ವೇಟ್ ಲಿಫ್ಟರ್ ರಾಜೇಶ್ ತ್ಯಾಗಿ ಅವರನ್ನು ವಿವಾಹವಾದರು. 2001 ರಲ್ಲಿ, ತನ್ನ ಕ್ರೀಡೆಯಲ್ಲಿ ಒಲಿಂಪಿಕ್ ಕಂಚಿನ ಪದಕವನ್ನು ಗೆದ್ದ ಒಂದು ವರ್ಷದ ನಂತರ ಅವರಿಗೆ ಗಂಡು ಮಗುವಾಯಿತು. ಅವರು 2002 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧೆಗಳಿಗೆ ಮರಳಲು ಯೋಜಿಸಿದ್ದರು. ಆದರೆ ಅವರ ತಂದೆಯ ಮರಣದ ಕಾರಣದಿಂದ ಹಿಂದೆ ಸರಿದರು. 2004ರ ಒಲಿಂಪಿಕ್ಸ್‌ನಲ್ಲಿ ಗುರಿ ಮುಟ್ಟಲು ವಿಫಲವಾದ ನಂತರ ಅವರು ನಿವೃತ್ತರಾದರು. ಕರ್ಣಂ ಮಲ್ಲೇಶ್ವರಿ ಮತ್ತು ತ್ಯಾಗಿ ಪ್ರಸ್ತುತ ಹರಿಯಾಣದ ಯಮುನಾ ನಗರದಲ್ಲಿ ತಮ್ಮ ಮಗ ಮತ್ತು ಅತ್ತೆಯೊಂದಿಗೆ ವಾಸಿಸುತ್ತಿದ್ದು, ಅವರು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಮುಖ್ಯ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಾರೆ. ಇವರಿಗೆ ಕರಾವಳಿ ತರಂಗಿಣಿ ಶುಭ ಹಾರೈಸುತ್ತಿದೆ.

# ಸುದ್ದಿ ತುಣುಕು

ಗಂಗಾವತಿಯಲ್ಲಿ 15ನೇ ಶತಮಾನಕ್ಕೆ ಸೇರಿದ ಎರಡು ಶಿಲಾಶಾಸನಗಳು ಪತ್ತೆಯಾಗಿದಗದು, ಜೈನ ಧರ್ಮದ ಉಲ್ಲೇಖವಿದೆ.

ಕೊಲ್ಲೂರು ಮೂಕಾಂಬಿಕೆಗೆ-4 ಕೋಟಿ ಮೌಲ್ಯದ ವಜ್ರಖಚಿತ ಕಿರೀಟ ಅರ್ಪಿಸಿದ ಇಳಯರಾಜ

ಕರ್ನಾಟಕದಲ್ಲಿ ದುಡಿಯುವ ವರ್ಗ ಪ್ರಬಲವಾಗಿದ್ದು, ಮಹಿಳಾ ವಿಚ್ಛೇದನ, ವಿಧವಾ, ಪ್ರತ್ಯೇಕ ಪ್ರಕರಣಗಳಲ್ಲಿ ಹೆಚ್ಚಳ ಕಂಡು ಬಂದಿದೆ ಎಂದು ವರದಿಯಾಗಿದೆ

ದಸರಾ ಉದ್ಘಾಟಿಸಲು ಬಾನು ಮುಷ್ತಾಕ್‌ಗೆ ಆಹ್ವಾನ ಪ್ರಶ್ನಿಸಿದ್ದ ಅರ್ಜಿಯ ತುರ್ತು ವಿಚಾರಣೆಗೆ ಹೈಕೋರ್ಟ್ ನಿರಾಕರಣೆ

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅಡಿ ಸ್ವಾಧೀನಕ್ಕೊಳಪಡುವ ಭೂಮಿಗಳಿಗೆ ದರ ನಿಗದಿಯನ್ನು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗುತ್ತಿದೆ ಎನ್ನಲಾಗಿದೆ.

ಇ.ಡಿ ಅಧಿಕಾರಿಗಳಿಂದ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಬಂಧನ ಪ್ರಶ್ನಿಸಿ ಅವರ ಪತ್ನಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ಬುಧವಾರ ನಡೆಯಿತು.

ಅಕ್ರಮ ಗಣಿಗಾರಿಕೆಯಿಂದ ಗಳಿಸಿರುವ ಆಸ್ತಿಗಳ ಜಪ್ತಿಗೆ ಸಂಬಂಧಿಸಿದ ಕಾನೂನಿಗೆ ರಾಜ್ಯಪಾಲರು ಮುದ್ರೆ ಒತ್ತಿದ್ದು, ರಾಜ್ಯದಲ್ಲಿ ಅಧಿಕೃತವಾಗಿ ಜಾರಿಗೆ ಬಂದಿದೆ.

ಕೋಮು ಭಾವನೆಗಳನ್ನು ಕೆರಳಿಸಿ, ಜನರನ್ನು ವಿಭಜಿಸಿ, ಬೆಂಕಿ ಹಚ್ಚುವುದೇ ಬಿಜೆಪಿ ನಾಯಕರ ಕೆಲಸ. ಅವರಿಗೆ ಅಭಿವೃದ್ಧಿ ಬಗ್ಗೆ ಚಿಂತೆ ಇಲ್ಲ ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಟೀಕಿಸಿದ್ದಾರೆ.

ಛತ್ತೀಸ್‌ಗಢದ ನಾರಾಯಣಪುರದಲ್ಲಿ ಒಂದೇ ದಿನ 16 ಸಕ್ರಿಯ ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ.

ದೆಹಲಿ ಪೊಲೀಸ್ ವಿಶೇಷ ದಳವು ಪಾಕಿಸ್ತಾನಿ ಭಯೋತ್ಪಾದಕರೊಂದಿಗೆ ಸಂಪರ್ಕ ಹೊಂದಿದ್ದ ಐವರನ್ನು ಬಂಧಿಸಿದೆ.

ಕರ್ನಾಟಕ ವಿಧಾನ ಪರಿಷತ್‌ಗೆ ಇತ್ತೀಚೆಗೆ ನಾಮನಿರ್ದೇಶನಗೊಂಡಿರುವ ಡಾ.ಆರತಿ ಕೃಷ್ಣ, ಎಫ್. ಎಚ್. ಜಕ್ಕಪ್ಪನವರ್, ಕೆ. ಶಿವಕುಮಾರ್ ಮತ್ತು ರಮೇಶ್ ಬಾಬು ವಿಧಾನ ಪರಿಷತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಹಿಂಸಾತ್ಮಕ ಪ್ರತಿಭಟನೆಯಿಂದ ನಲುಗಿರುವ ನೇಪಾಳದಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆ, ಬಳ್ಳಾರಿ ಜಿಲ್ಲೆ ಸೇರಿದಂತೆ 22ಕ್ಕೂ ಅಧಿಕ ಜನ ಸಿಲುಕಿ ಸ್ವದೇಶಕ್ಕೆ ಬರಲು ಪರದಾಟ.

ಎಲೆನ್ ಮಸ್ಕ್‌ನ್ನು ಹಿಂದಿಕ್ಕಿದ ಲ್ಯಾರಿ ಎಲಿಸನ್ ಈಗ ವಿಶ್ವದ ಅತ್ಯಂತ ಸಿರಿವಂತ ವ್ಯಕ್ತಿ

ಮೈಸೂರು ದಸರಾದಲ್ಲಿ ಈ ಬಾರಿ 15 ದಿನಗಳ ಕಾಲ ಆಹಾರ ಮೇಳ

ಬೆಂಗಳೂರಲ್ಲಿ ಐಎಎಫ್ ಅಧಿಕಾರಿ ಮತ್ತು ಖಾಸಗಿ ಸಂಸ್ಥೆಯ ಉದ್ಯೋಗಿಯ ಮಧ್ಯೆ ನಡೆದ ಗಲಾಟೆ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಸಮೀಕ್ಷೆ ಪಟ್ಟಿಯಲ್ಲಿ ಏನನ್ನು ಬರೆಯಿಸಬೇಕು ಅಂತ ಸಮಾಲೋಚನೆ ಮಾಡುತ್ತಿದ್ದೇವೆ ಎಂದು ವಚನಾನಂದ ಶ್ರೀ ಹೇಳಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ನಾಡಗೀತೆಗೆ ನೂರು ವರ್ಷ ತುಂಬುತ್ತಿರುವ ಹಿನ್ನೆಲೆ ಅವರು ಪಾಠ -ಪ್ರವಚನ, ಕವಿತೆ ಬೋಧಿಸಿದ ಸ್ಥಳದ ಆವರಣದಲ್ಲಿ ದಸರಾ ಕವಿಗೋಷ್ಠಿ ನಡೆಯಲಿದೆ.

ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯ ರದ್ದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂಕೋರ್ಟ್ ನಿರಾಕರಿಸಿದೆ.

# ಹಾಗಲಕಾಯಿ ಗೊಜ್ಜು



**ಬೇಕಾಗುವ ಪದಾರ್ಥಗಳು :**

ಹಾಗಲಕಾಯಿ – 2
ಉದ್ದಿನ ಬೇಳೆ – 1 ಚಮಚ
ಎಳ್ಳು – 2 ಚಮಚ
ಮೆಂತ್ಯೆ – ಕಾಲು ಚಮಚ
ಒಣ ಕೊಬ್ಬರಿ – 1 ಬಟ್ಟಲು
ಒಣಮೆಣಸಿನಕಾಯಿ – 10
ಹುಣಸೆಹಣ್ಣು – ರುಚಿಗೆ
ಬೆಲ್ಲ – ಸ್ವಲ್ಪ
ಉಪ್ಪು– ರುಚಿಗೆ ತಕ್ಕಷ್ಟು
ಅರಶಿನ – ಚಿಟಿಕೆ
ಇಂಗು – ಸ್ವಲ್ಪ
ತೆಂಗಿನೆಣ್ಣೆ – 1 ಚಮಚ
ಸಾಸಿವೆ – 1 ಚಮಚ
ಬೆಳ್ಳುಳ್ಳಿ – 3 ಎಸಳು

**ಮಾಡುವ ವಿಧಾನ :** ಮೊದಲಿಗೆ ಉದ್ದಿನಬೇಳೆ, ಮೆಂತ್ಯೆ, ಎಳ್ಳು, ಒಣಕೊಬ್ಬರಿ, ಒಣಗಿದ ಮೆಣಸಿನಕಾಯಿ ಎಲ್ಲ ವನ್ನು ಬೇರೆಬೇರೆಯಾಗಿ ಹುರಿದು ಮಿಕ್ಸಿ ಜಾರ್‌ಗೆ ಹಾಕಿ ಪುಡಿ ಮಾಡಿಕೊಳ್ಳಬೇಕು. ನಂತರ ಹಾಗಲಕಾಯಿಯನ್ನು ತೊಳೆದು, ಒರೆಸಿ, ಬೀಜ ತೆಗೆದು ಸಣ್ಣ ಹೋಳುಗಳಾಗಿ ಹೆಚ್ಚಿ ಎಣ್ಣೆಯಲ್ಲಿ ಕರಿದುಕೊಳ್ಳಬೇಕು. ನಂತರ ಕರಿದ ಹಾಗಲಕಾಯಿಗೆ ಹುಣ ಸೆರಸ, ಪುಡಿ ಮಾಡಿಕೊಂಡ ಮಿಶ್ರ ಣ, ಉಪ್ಪು, ಚಿಟಿಕೆ ಅರಿಶಿನ, ಇಂಗು ಎಲ್ಲವನ್ನು ಹಾಕಿ ಚೆನ್ನಾಗಿ ಕುದಿಸಿಕೊಳ್ಳಬೇಕು. ಈಗ ಒಂದು ಬಾಣಲೆಯಲ್ಲಿ 1 ಚಮಚ ಎಣ್ಣೆ ಕಾಯಿಸಿ, ಸಾಸಿವೆ, ಬೆಳ್ಳುಳ್ಳಿ ಹಾಕಿ ಒಗ್ಗರಣೆ ಮಾಡಿದರೆ ರುಚಿಕರವಾದ ಹಾಗಲಕಾಯಿ ಗೊಜ್ಜು ಸಿದ್ಧ.

# ಕತಾರ್ ಮೇಲೆ ಇಸ್ರೇಲ್ ದಾಳಿ : ಹಮಾಸ್ ಉಗ್ರರೇ ಟಾರ್ಗೆಟ್



ದೋಹಾ: ಕತಾರ್ ರಾಜಧಾನಿ ದೋಹಾದಲ್ಲಿ ಹಮಾಸ್‌ನ ಉಗ್ರ ನಾಯಕರನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಮಂಗಳವಾರ ದಾಳಿ ನಡೆಸಿದೆ. ಆದರೆ ಸಾವುನೋವಿನ ಮಾಹಿತಿ ಲಭಿಸಿಲ್ಲ. ದಾಳಿಯನ್ನು ಕತಾರ್ ಖಂಡಿಸಿದ್ದು, 'ಹಮಾಸ್ ಪ್ರಧಾನ ಕಚೇರಿಯ ಮೇಲೆ ಇಸ್ರೇಲ್ ನಡೆಸಿರುವುದು ಹೇಡಿತನದ ದಾಳಿ. ಇದು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆ' ಎಂದು ಕಿಡಿಕಾರಿದೆ. ಇಸ್ರೇಲ್ ಭದ್ರತಾ ಸಂಸ್ಥೆ ಶಿನ್ ಬೆಟ್ ನೆರವಿನಿಂದ ಈ ದಾಳಿ ನಡೆದಿದೆ. ಕತಾರ್ ಅಮೆರಿಕದ ಸ್ನೇಹಿತ ದೇಶವಾಗಿದ್ದು, ಯುದ್ಧ ಸಂಧಾನದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇಂಥದ್ದರಲ್ಲಿ ನಡೆದ ಈ ದಾಳಿ ಶಾಂತಿ ಸಂಧಾನಕ್ಕೆ ಹಿನ್ನಡೆ ತಂದಿದೆ.

# ಎಲ್ಲಾ ಶರಿಯಾ ಕಾನೂನು ರದ್ದುಗೊಳಿಸಿದ ಟೆಕ್ಸಾಸ್


SHARIA LAW AND SHARIA CITIES ARE BANNED IN THE STATE OF TEXAS

ಅಮೇರಿಕಾ : ಅಮೇರಿಕಾದ ಟೆಕ್ಸಾಸ್ ರಾಜ್ಯದ ರಾಜ್ಯಪಾಲ ಟೆಡ್ ಅಬಾಟ್ ಅವರು ಸೆ. 8 ರಂದು ಎಲ್ಲಾ ಶರಿಯಾ ಕಾನೂನುಗಳನ್ನು ನಿಷೇಧಿಸುವುದಾಗಿ ಘೋಷಿಸಿದರು. ಅಮೇರಿಕಾ 2010ರಲ್ಲಿ ತನ್ನ ರಾಜ್ಯಗಳಲ್ಲಿ ಶರಿಯಾ ಕಾನೂನುಗಳನ್ನು ರದ್ದುಪಡಿಸಲು ನಿರ್ಧರಿಸಿತ್ತು. ಈ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಂಡ ಅಮೇರಿಕಾದ 50 ರಾಜ್ಯಗಳಲ್ಲಿ ಟೆಕ್ಸಾಸ್ 18ನೇ ರಾಜ್ಯವಾಯಿತು. ರಾಜ್ಯದ ರಾಜಧಾನಿ ಹೂಸ್ಟನ್‌ನಲ್ಲಿನ ಒಂದು ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಡಿತ್ತು. ಅದರಲ್ಲಿ ಒಬ್ಬ ಇಮಾಮ್ ಅಂಗಡಿಯವರಿಗೆ, ಇಸ್ಲಾಂನಲ್ಲಿ 'ಹರಾಮ್' (ನಿಷಿದ್ಧ) ಆಗಿರುವುದರಿಂದ ಮದ್ಯ, ಹಂದಿ ಮಾಂಸ ಮತ್ತು ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡಬಾರದು ಎಂದು ಧ್ವನಿವರ್ಧಕದಿಂದ ಆದೇಶಿಸುತ್ತಿರುವುದು ಕಂಡುಬಂದಿದೆ.

# ನೇಪಾಳದಲ್ಲಿ ಹಿಂದೂ ರಾಜ್ಯ ಮರುಸ್ಥಾಪನೆ ಕನಸು?



ನೇಪಾಳ : ನೇಪಾಳದ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿದೆ. ಪ್ರತಿಭಟನಕಾರರ ಬೇಡಿಕೆ ಈಡೇರಿದ್ದರೂ ಪ್ರತಿಭಟನೆ, ಹಿಂಸಾಚಾರ ನಿಲ್ಲುತ್ತಿಲ್ಲ. ನೇಪಾಳ ಸೇನೆ ದೇಶದ ಜನತೆಯನ್ನುದ್ದೇಶಿ ಮಹತ್ವದ ಕರೆ ನೀಡಿದೆ. ಶಾಂತಿ ಕಾಪಾಡುವಂತೆ ಮನವಿ ಮಾಡಿದೆ. ಇತ್ತ ನೇಪಾಳದ ಮಾಜಿ ಪ್ರಧಾನಿಗಳು, ಅವರ ಕುಟುಂಬದ ಮೇಲೆ ಹಲ್ಲೆಯಾಗಿದೆ. ಇದರ ನಡುವೆ ಮಹತ್ವದ ಬೆಳವಣಿಗೆ ಆಗಿದೆ. ನೇಪಾಳ ಮತ್ತೆ ಹಿಂದೂ ದೇಶ ಎಂದು ಘೋಷಣೆ ಮಾಡಿ ರಾಜರ ಆಡಳಿತ ಮರುಕಳಿಸುತ್ತಾ? ಈ ಮಾತುಗಳು ಬಲವಾಗತೊಡಗಿದೆ. 2008 ರವರೆಗೆ ನೇಪಾಳ ವಿಶ್ವದ ಏಕೈಕ ಹಿಂದೂ ದೇಶವಾಗಿತ್ತು.

# ಇಸ್ರೇಲ್‌ನಲ್ಲಿ ಬಸ್ ಹತ್ತಿ ಪ್ರಯಾಣಿಕರ ಮೇಲೆ ಗುಂಡಿನ ದಾಳಿ!

ಜೆರುಸಲೆಮ್ : ಜೆರುಸಲೆಮ್'ನಲ್ಲಿ ಸಾರ್ವಜನಿಕ ಬಸ್ ಹತ್ತಿದ ಭಯೋತ್ಪಾದಕರು ಪ್ರಯಾಣಿಕರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಈ ಮಾರಕ ಗುಂಡಿನ ದಾಳಿಯಲ್ಲಿ ನಾಲ್ವರು ಸಾವನ್ನಪ್ಪಿದ್ದು, ಕನಿಷ್ಠ 15 ಜನರು ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ಅಧಿಕಾರಿಗಳು ತಿಳಿಸಿದ್ದಾರೆ. ಗಾಯಗೊಂಡವರಲ್ಲಿ ಆರು ಜನರ ಸ್ಥಿತಿ ಗಂಭೀರವಾಗಿದೆ ಎಂದು ಇಸ್ರೇಲ್‌ನ ತುರ್ತು ವೈದ್ಯಕೀಯ ಸೇವೆ, ಮ್ಯಾಗೆನ್ ಡೇವಿಡ್ ಆಡಮ್ ತಿಳಿಸಿದ್ದಾರೆ. ವರದಿಯ



ಪ್ರಕಾರ, ಸೆ. 8 ಸೋಮವಾರ ಜೆರುಸಲೆಮ್‌ನ ಜನನಿಬಿಡ ಛೇದಕದಲ್ಲಿ ದಾಳಿಕೋರರು ಬಸ್‌ನಲ್ಲಿ ಗುಂಡು ಹಾರಿಸಿದ್ದಾರೆ.

# ಗೂಗಲ್‌ಗೆ 30000 ಕೋಟಿ ದಂಡ




ವಾಷಿಂಗ್ಟನ್: ಟೆಕ್ ದಿಗ್ಗಜ ಗೂಗಲ್ ಸಂಸ್ಥೆಗೆ ಐರೋಪ್ಯ ಒಕ್ಕೂಟವು(ಇ ಯು) ಬರೋಬ್ಬರಿ 30,000 ಕೋಟಿ ರೂ.ಗಳ ಭಾರೀ ದಂಡ ವಿಧಿಸಿದೆ. ತನ್ನದೇ ಜಾಹೀರಾತು ತಂತ್ರಜ್ಞಾನ ಸೇವಾದಾರರಿಂಗ ಆದ್ಯತೆ ನೀಡುವ ಮೂಲಕ ಪ್ರತಿಸ್ಪರ್ಧಿ ಜಾಹಿರಾತು ತಂತ್ರಜ್ಞಾನ ಒದಗಿಸುವವರಿಗೆ ಅನ್ಯಾಯವಾಗುವಂತೆ ಗೂಗಲ್ ಕಾರ್ಯನಿರ್ವಹಿಸುತ್ತಿದೆ. ಈ ಮೂಲಕ ತನ್ನ ಪ್ರಾಬಲ್ಯವನ್ನು ಗೂಗಲ್ ದುರುಪಯೋಗಪಡಿಸಿಕೊಂಡಿದೆ ಎಂದು ಇ.ಯು. ಆರೋಪಿಸಿದೆ. ಗೂಗಲ್‌ನ ಜಾಹಿರಾತು ಸೇವೆಗಷ್ಟೇ ಈ ದಂಡ ಹಾಕಲಾಗಿದ್ದು, ಗೂಗಲ್‌ನ ವಿವಿಧ ಸೇವೆಗಳ ವಿರುದ್ಧ ಇ.ಯು. ವಿಧಿಸಿದಂತಹ ಒಟ್ಟಾರೆ ದಂಡದ ಮೊತ್ತ 1 ಲಕ್ಷ ಕೋಟಿ ರೂ.ಗಳನ್ನು ಮೀರಿದಂತಾಗಿದೆ.

# ಗಾಝಾದಲ್ಲಿ ನರಕದ ಬಾಗಿಲು ಈಗ ತೆರೆದಿದೆ ಎಂದ ಇಸ್ರೇಲ್

ಟೆಲ್ ಅವಿವ್ : ಗಾಝಾ ನಗರದ ಜನನಿಬಿಡ ಪ್ರದೇಶದಲ್ಲಿರುವ 12 ಅಂತಸ್ತಿನ 'ಮುಷ್ತಾಹ ಟವರ್' ಕಟ್ಟಡವನ್ನು ಇಸ್ರೇಲ್ ಧ್ವಂಸಗೊಳಿಸಿರುವುದಾಗಿ ವರದಿಯಾಗಿದೆ. ಈ ಮಧ್ಯೆ, ಗಾಝಾದಲ್ಲಿ ನರಕದ ಬಾಗಿಲು ಈಗ ತೆರೆದಿದೆ ಎಂದು ಇಸ್ರೇಲ್ ನ ರಕ್ಷಣಾ ಸಚಿವಾಲಯ ಘೋಷಿಸಿದೆ. ಬಹುಮಹಡಿ ಕಟ್ಟಡದ ಮೇಲಿನ ದಾಳಿಯಲ್ಲಿ ಹಲವಾರು ನಾಗರಿಕರ ಸಾವು-ನೋವು ಸಂಭವಿಸಿದೆ. ಗಾಝಾ ನಗರವನ್ನು ವಶಕ್ಕೆ ಪಡೆಯುವ ಕಾರ್ಯಾಚರಣೆಯ



ಭಾಗವಾಗಿ ಮುಂದಿನ ದಿನಗಳಲ್ಲಿ ಇನ್ನಷ್ಟು ಬಹುಮಹಡಿ ಕಟ್ಟಡಗಳನ್ನು ಗುರಿಯಾಗಿಸುವುದಾಗಿ ಇಸ್ರೇಲ್ ಮಿಲಿಟರಿ ಇದಕ್ಕೂ ಮುನ್ನ ಎಚ್ಚರಿಕೆ ನೀಡಿರುವುದಾಗಿ ವರದಿಯಾಗಿದೆ.

# ಏಷ್ಯಾ ಕಪ್ 2025 ಚಾಂಪಿಯನ್ ಆದ ಭಾರತ ಹಾಕಿ ತಂಡ




ನವದೆಹಲಿ: 2025ರ ಆವೃತ್ತಿಯ ಅಂತಿಮ ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು ಸೋಲಿಸುವ ಮೂಲಕ ಭಾರತ ಪುರುಷರ ಹಾಕಿ ತಂಡ ನಾಲ್ಕನೇ ಬಾರಿಗೆ ಹಾಕಿ ಏಷ್ಯಾ ಕಪ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ತಂಡವು ಆರಂಭದಿಂದಲೂ ಪ್ರಾಬಲ್ಯ ಸಾಧಿಸಿ, ಬಿಹಾರದ ರಾಜ್‌ಗಿರ್‌ನಲ್ಲಿ ಕೊರಿಯನ್ನರನ್ನು 4–1 ಗೋಲುಗಳಿಂದ ಸೋಲಿಸುವ ಮೂಲಕ ಅತ್ಯಂತ ನಿರ್ಣಾಯಕ ಪಂದ್ಯದಲ್ಲಿ ತಮ್ಮ ಉತ್ಸಾಹಭರಿತ ಪ್ರಯತ್ನವನ್ನು ಮುಂದುವರಿಸಿತು.

# ಆರ್ಚರಿ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಬಂಗಾರದ ಪದಕ

ದಕ್ಷಿಣ ಕೊರಿಯಾ : ಆರ್ಚರಿ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪುರುಷರ ಕಾಂಪೌಂಡ್ ತಂಡ ಮೊದಲ ಬಂಗಾರ ಪದಕವನ್ನು ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದೆ. ಫೈನಲ್‌ನಲ್ಲಿ ಫ್ರಾನ್ಸ್ ವಿರುದ್ಧ ಜಯ ಸಾಧಿಸಿ ಚಿನ್ನದೊಂದಿಗೆ ಮಿನುಗಿತು. ರಿಷಭ್ ಯಾದವ್, ಅಮಾನ್ ಸೈನಿ ಮತ್ತು ಪ್ರಥಮೇಶ್ ಅವರನ್ನೊಳಗೊಂಡ ಭಾರತ ತಂಡ ಫ್ರಾನ್ಸ್ ವಿರುದ್ಧ 235–233 ಅಂಕಗಳ ಗೆಲುವು ಸಾಧಿಸಿತು. ಫೈನಲ್ ಹಾದಿ



ಯಲ್ಲಿ ಭಾರತ ತಂಡ ಆಸ್ಟ್ರೇಲಿಯ, ಪವರ್ ಹೌಸ್ ಯುಎಸ್‌ಎ ಮತ್ತು ಟರ್ಕಿಯನ್ನು ಪರಾಭವಗೊಳಿಸಿತ್ತು.

# ನಕಲಿ ಪಹಣಿ ಜಾಲ ಸದೆಬಡಿಯಲು ತನಿಖೆ : ಶಿವಾನಂದ ಪಾಟೀಲ



ಹಾವೇರಿ: 'ನಕಲಿ ಪಹಣಿ ಪತ್ರ (ಆರ್.ಟಿ.ಸಿ) ತಯಾರಿಸಿ ರೈತರಲ್ಲದವರಿಗೆ ಬೆಳೆಹಾನಿ ಪರಿಹಾರ ಕೊಡಿಸುವ ಜಾಲ ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಆರೋಪವಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಎರಡು ತಿಂಗಳೊಳಗೆ ವರದಿ ಸಲ್ಲಿಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಕೃಷಿ ಇಲಾಖೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು. 'ನಕಲಿ ಪಹಣಿ ಪತ್ರ ಸೃಷ್ಟಿಸಲು ಏಜೆಂಟರು ಸೃಷ್ಟಿಯಾಗಿದ್ದಾರೆ. ಅವರು ಯಾರು ? ಅವರ ಹಿಂದಿರುವವರ ಯಾರು ? ಎಂಬುದನ್ನು ಪತ್ತೆ ಮಾಡಬೇಕು. ಇಂಥ ಪ್ರಕರಣಗಳು ನಡೆಯದಂತೆ ಜಾಗೃತಿ ವಹಿಸಬೇಕು' ಎಂದು ಸೂಚಿಸಿದರು.

# ದೇವಾಲಯದ ಸುತ್ತಮುತ್ತ ಮಾಂಸಾಹಾರ ನಿಷೇಧ ನೋಟಿಸ್ ವಾಪಸ್

ಬೆಂಗಳೂರು: ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಶಿವನಗೆರೆ ಗ್ರಾಮದಲ್ಲಿನ ಹೊನ್ನೇಶ್ವರ ದೇವಾಲಯದ ಸುತ್ತಲು ಪ್ರಾಣಿಗಳ ವಧೆ ಮತ್ತು ಮಾಂಸಾಹಾರ ಸೇವನೆ ನಿಷೇಧಿಸಿ ಹೊರಡಿಸಿರುವ ನೋಟಿಸ್ ಹಿಂಪಡೆಯಲಾಗುವುದು ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ. ದೇವಾಲ



ಯದ ಸುತ್ತಮುತ್ತಲ ಭಾಗಗಳಲ್ಲಿ ಪ್ರಾಣಿವಧೆ ಮಾತ್ರ ಸೀಮಿತಗೊಳಿಸಿ ಮುಂದಿನ ಒಂದು ವಾರದಲ್ಲಿ ಹೊಸದಾಗಿ ನೋಟಿಸ್ ನೀಡಲಾಗುವುದು ಎಂದು ಸರ್ಕಾರದ ಪರ ವಕೀಲರು ಹೈಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ. ದೇವಾಲಯದ ಆವರಣದಲ್ಲಿ ಪ್ರಾಣಿಬಲಿಗೆ ಸಂಬಂಧಿಸಿದಂತೆ ಮಾತ್ರ ನಿರ್ಬಂಧ ವಿಧಿಸಲಾಗಿದೆ.

# ಪಂಪ್ ಸೆಟ್ ವಿದ್ಯುತ್ ಸಂಪರ್ಕಗಳಿಗೆ ರಿಯಾಯಿತಿ ಹೆಚ್ಚಳ

ಧಾರವಾಡ : ಪಂಪ್ಸೆಟ್ ವಿದ್ಯುತ್ ಸಂಪರ್ಕಗಳಿಗೆ ಈಗಾಗಲೇ ಶೇ. 60ರಷ್ಟು ಇರುವ ರಿಯಾಯಿತಿಯನ್ನು ಶೇ. 80ರಷ್ಟು ಹೆಚ್ಚಳ ಮಾಡಿ ಯಾವುದೇ ಅಕ್ರಮ, ಹೆಚ್ಚುವರಿ ಆರ್ಥಿಕ ವೆಚ್ಚವಾಗದಂತೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ ಎಂದು ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ. ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಇಂಧನ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಜರುಗಿಸಿ, ಮಾತನಾಡಿದರು. 2004ರಿಂದಲೂ ಅಭ್ಯಾಸವಾಗಿರುವ ಅನಧಿಕೃತ ವಿದ್ಯುತ್ ಸಂಪರ್ಕಗಳನ್ನು ಸಕ್ರಮಗೊಳಿಸಲು ನಿರ್ದಿಷ್ಟ ಮಾನದಂಡಗಳನ್ನು ಮಾಡಲಾಗಿದೆ ಎಂದರು.



# ಬೆಳೆ ನಷ್ಟ ಪರಿಹಾರದ ಮೊತ್ತ ಹೆಚ್ಚಳ : ಸಿ.ಎಂ ಸಿದ್ದರಾಮಯ್ಯ

ಬೆಂಗಳೂರು : ರಾಜ್ಯದಲ್ಲಿ ಅತಿವೃಷ್ಟಿಯಿಂದ ಉಂಟಾದ ಹಾನಿ ಹಾಗೂ ತೆಗೆದುಕೊಂಡ ಕ್ರಮಗಳ ಕುರಿತು ರಾಜ್ಯದ ಎಲ್ಲಾ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಿಎಂ ಸಿದ್ದರಾಮಯ್ಯ ವಿಡಿಯೋ ಸಂವಾದ ನಡೆಸಿದ ಬಳಿಕ ಬೆಳೆ ನಷ್ಟ ಪರಿಹಾರದ ಮೊತ್ತ ಹೆಚ್ಚಳ



ಮಾಡುವುದಾಗಿ ಹೇಳಿದ್ದಾರೆ. ಮಳೆಯಿಂದ ರಾಜ್ಯದ ಹಲವು ಕಡೆ ವ್ಯಾಪಕವಾಗಿ ಬೆಳೆ ಹಾನಿಯಾಗಿದ್ದು, ರೈತರಿಗೆ ಎಸ್‌ಡಿಆರ್‌ಎಫ್ ಮಾರ್ಗಸೂಚಿಗಿಂತ ಹೆಚ್ಚಿನ ಪರಿಹಾರ ನಿಗದಿ ಮಾಡುವ ಕುರಿತಂತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ಹೇಳಿದರು.

# ಪಾಲಿಶ್ ಮಾಡಿ 'ಫಾರಿನ್'ಗೆ 'ಅನ್ನಭಾಗ್ಯದ ಅಕ್ಕಿ'



ಯಾದಗಿರಿ : ಫಾರಿನ್ ಗೆ ಅನ್ನಭಾಗ್ಯದ ಅಕ್ಕಿ ಕಳುಹಿಸುತ್ತಿದ್ದ ಜಾಲವೊಂದನ್ನು ಆಹಾರ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದು, 6000 ಟನ್ ಅಕ್ಕಿ ಜಪ್ತಿ ಮಾಡಿಕೊಂಡಿದ್ದಾರೆ. ಆಹಾರ ಇಲಾಖೆಯ ಅಧಿಕಾರಿಗಳು ಶುಕ್ರವಾರ ರಾತ್ರಿ ಯಾದಗಿರಿ ಜಿಲ್ಲೆ ಗುರುಮಠಕಲ್ನ ಶ್ರೀ ಲಕ್ಷ್ಮೀ ವೆಂಕಟೇಶ್ವರ ಇಂಡಸ್ಟ್ರೀಸ್ ಮೇಲೆ ದಾಳಿ ನಡೆಸಿ, ಪ್ರಮಾಣ ದಲ್ಲಿ ಸರ್ಕಾರದ 'ಅನ್ನಭಾಗ್ಯ' ಪಡಿತರ ಅಕ್ಕಿಯನ್ನು ಜಪ್ತಿ ಮಾಡಿದ್ದಾರೆ. ಬಿಪಿಎಲ್, ಎಪಿಎಲ್ ಕಾರ್ಡ್‌ದಾರರಿಗೆ ವಿತರಿಸುತ್ತಿದ್ದ ಅಕ್ಕಿಯನ್ನು ಪಾಲಿಶ್ ಮಾಡಿ ದುಬೈ, ಫ್ರಾನ್ಸ್ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು ಎನ್ನಲಾಗಿದ್ದು, ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 6000ಟನ್ ಅಕ್ಕಿ ಸೀಜ್ ಮಾಡಿದ್ದಾರೆ.

# 80,000 ಹುದ್ದೆ ಭರ್ತಿಗೆ ಶೀಘ್ರದಲ್ಲೇ ಸರಕಾರದಿಂದ ಅಧಿಸೂಚನೆ

ಬೆಂಗಳೂರು: ರಾಜ್ಯ ಸರಕಾರದ ನಾನಾ ಇಲಾಖೆ, ಸಂಸ್ಥೆಗಳಲ್ಲಿ ಅನುಮೋದಿತ ಹುದ್ದೆಗಳ ನೇಮಕಕ್ಕೆ ಹೊಸದಾಗಿ ಅಧಿಸೂಚನೆಗಳು ಹೊರಬೀಳಲಿದ್ದು, ಉದ್ಯೋಗಾಕಾಂಕ್ಷಿ ಯುವಜನರ ನಿರೀಕ್ಷೆಗಳು ಗರಿಗೆದರಿವೆ. ಪರಿಶಿಷ್ಟ ಜಾತಿಗಳ ಒಳಮೀಸಲು ವರ್ಗೀಕರಣದಂತೆ ಈಗಾಗಲೇ ನಿಗದಿಯಾಗಿರುವ ರೋಸ್ಟರ್




ಬಿಂದು ಆಧರಿಸಿ ಅನುಮೋದಿತ ಹುದ್ದೆಗಳ ನೇರ ನೇಮಕಕ್ಕೆ ಹೊಸದಾಗಿ ಅಧಿಸೂಚನೆ ಹೊರಡಿಸಲು ಹಾಗೂ ಕಾಲಮಿತಿಯಲ್ಲಿ ನೇಮಕ ಪ್ರಕ್ರಿಯೆ ಪೂರ್ಣಗೊಳಿಸಲು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ.

# ಅರ್ಹ ಬಿಪಿಎಲ್ ಕಾರ್ಡುದಾರರಿಗೆ ತೊಂದರೆಯಾಗಬಾರದು : ಸಿಎಂ.

ಬೆಂಗಳೂರು : ರಾಜ್ಯದಲ್ಲಿ ಅನರ್ಹ ಬಿಪಿಎಲ್ ಕಾರ್ಡ್ ಗಳನ್ನು ರದ್ದುಪಡಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆದರೆ ಅರ್ಹ ಬಿಪಿಎಲ್ ಕಾರ್ಡುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅರ್ಹರು ಯಾರಾದರೂ ಬಿಟ್ಟು ಹೋಗಿದ್ದರೆ ಅವರಿಗೆ ಬಿಪಿಎಲ್ ಕಾರ್ಡ್ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು. ಅನ್ನಭಾಗ್ಯ ಯೋಜನೆಯಡಿ ಅಕ್ಕಿಯ ಜೊತೆಗೆ ಪೌಷ್ಟಿಕ ಧಾನ್ಯ, ಅಗತ್ಯ ಆಹಾರ ಸಾಮಾಗ್ರಿಗಳನ್ನು ಒಳಗೊಂಡ ಕಿಟ್ ಒದಗಿಸುವ ಕುರಿತು ಪರಿಶೀಲನೆ. ಈ ಕುರಿತು ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.



# ಸಂಪೂರ್ಣ ಸಾಕ್ಷರತಾ ರಾಜ್ಯವೆಂದು ಘೋಷಿಸಿಕೊಂಡ ಹಿಮಾಚಲ !

ಶಿಮ್ಲಾ: ಹಿಮಾಚಲ ಪ್ರದೇಶವನ್ನು ಇಂದು ಸಂಪೂರ್ಣ ಸಾಕ್ಷರ ರಾಜ್ಯ ಎಂದು ಘೋಷಿಸಲಾಯಿತು. ಅಂತಾರಾಷ್ಟ್ರೀಯ ಸಾಕ್ಷರತಾ ದಿನವಾದ ಇಂದು ಶಿಮ್ಲಾದ ಪೀಟರ್‌ಹೋಫ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಮತ್ತು ಶಿಕ್ಷಣ ಸಚಿವ ರೋಹಿತ್ ಠಾಕೂರ್ ಅವರು



ಹಿಮಾಚಲ ಪ್ರದೇಶವನ್ನು ಸಂಪೂರ್ಣ ಸಾಕ್ಷರ ರಾಜ್ಯ ಎಂದು ಘೋಷಿಸಿದ್ದಾರೆ. ಘೋಷಣೆಯಾದ ತಕ್ಷಣ, ಹಿಮಾಚಲ ಪ್ರದೇಶವು ಸಂಪೂರ್ಣ ಸಾಕ್ಷರ ರಾಜ್ಯವಾಗುವ ಸ್ಥಾನಮಾನ ಪಡೆಯಿತು. ಹಿಮಾಚಲ ಪ್ರದೇಶವು ಶೇ. 99.02ರಷ್ಟು ಸಾಕ್ಷರತಾ ದರದೊಂದಿಗೆ ದೇಶದಲ್ಲಿ ಅಗ್ರಸ್ಥಾನಕ್ಕೇರಿದೆ.

# ಅಶೋಕ ಸ್ತಂಭದ ಚಿಹ್ನೆಯ ಅವಶ್ಯಕತೆ ಏನಿತ್ತು : ಓಮರ್ ಅಬ್ದುಲ್ಲಾ



ಶ್ರೀನಗರ: ಶ್ರೀನಗರದ ಐತಿಹಾಸಿಕ ಹಜರತ್ ಬಾಲ್ ದರ್ಗಾದ ಉದ್ಘಾಟನಾ ಫಲಕದ ಮೇಲೆ ಭಾರತ ರಾಷ್ಟ್ರ ಲಾಂಛನ ಅಶೋಕ ಸ್ತಂಭದ ಚಿಹ್ನೆಯನ್ನು ಬಳಕೆ ಮಾಡುವ ಅವಶ್ಯಕತೆ ಏನಿತ್ತು ಎಂದು ಜಮ್ಮು ಮತ್ತು ಕಾಶ್ಮೀರ ಸಿಎಂ ಒಮರ್ ಅಬ್ದುಲ್ಲಾ ಪ್ರಶ್ನಿಸಿದ್ದಾರೆ. ಈದ್-ಎ-ಮಿಲಾದ್ ಆಚರಣೆಯ ಮಧ್ಯೆ, ಶ್ರೀನಗರದ ಐತಿಹಾಸಿಕ ಹಜರತ್‌ಬಾಲ್ ದರ್ಗಾದಲ್ಲಿ ದೊಡ್ಡ ವಿವಾದ ಭುಗಿಲೆದ್ದಿದ್ದು, ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ, ಹಜರತ್‌ಬಾಲ್ ದರ್ಗಾದ ಉದ್ಘಾಟನಾ ಫಲಕದ ಮೇಲಿದ್ದ ಅಶೋಕ ಸ್ತಂಭದ ಚಿಹ್ನೆಯನ್ನು ಮೂಲಭೂತವಾದಿಗಳ ಗುಂಪೊಂದು ಒಡೆದು ಕಿತ್ತು ಹಾಕಿತ್ತು.

# 'ಸಿಂಧೂರ ಪೂಕಳಂ' : ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಪ್ರಕರಣ

ತಿರುವನಂತಪುರ: ಕೊಲ್ಲಂ ಜಿಲ್ಲೆಯ ಮುತ್ತುಪಿಲಕ್ಕಾಡುವಿನ ಶ್ರೀ ಪಾರ್ಥಸಾರಥಿ ದೇವಸ್ಥಾನದ ಬಳಿ ಓಣಂ ಪ್ರಯುಕ್ತ ಕೇಸರಿ ಧ್ವಜವನ್ನು ಹೋಲುವ ರೀತಿಯಲ್ಲಿ ಸಾಂಪ್ರದಾಯಿಕ ಹೂವಿನ ಅಲಂಕಾರ 'ಪೂಕ್ಕಳಂ' ಅನ್ನು ರಚಿಸಿದ ಆರೋಪದಲ್ಲಿ 27 ಆರೆಸ್ಸೆಸ್ ಕಾರ್ಯಕರ್ತರ ವಿರುದ್ಧ ಪೊಲೀಸರು ಪ್ರಕರಣವನ್ನು




ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿದ್ದನ್ನು ಟೀಕಿಸಿರುವ ಬಿಜೆಪಿ, ಇದು 'ಆಪರೇಷನ್ ಸಿಂಧೂರ ಪೂಕಳಂ' ವಿರುದ್ಧದ ಕ್ರಮ ಎಂದು ಬಣ್ಣಿಸಿದೆ. ಪುಷ್ಪಗಳಿಂದ 'ಆಪೇಷನ್ ಸಿಂಧೂರ' ಎಂದೂ ಬರೆಯಲಾಗಿತ್ತು. ರಾಜಕೀಯ ಚಿಹ್ನೆಗಳು ಮತ್ತು ಧ್ವಜಗಳ ಬಳಕೆಯನ್ನು ಕೇರಳ ಉಚ್ಚ ನ್ಯಾಯಾಲಯವು ನಿಷೇಧಿಸಿದೆ.

# ಮಿತ್ರ ಪಕ್ಷಕ್ಕೆ ಶಾಕ್ ಕೊಟ್ಟರಾ ನಿತೀಶ್ ಕುಮಾರ್ ?

ಪಾಟ್ನಾ: ಬಿಹಾರ ವಿಧಾನಸಭಾ ಚುನಾವಣೆ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕ್ಷೇತ್ರ ಹಂಚಿಕೆಗೂ ಮೊದಲೇ ಬಿಹಾರ ಸಿಎಂ ನಿತೀಶ್ ಕುಮಾರ್, ಮಿತ್ರಪಕ್ಷವಾದ ಬಿಜೆಪಿಗೆ ಸಣ್ಣದಾದ ಶಾಕ್ ನೀಡಿದೆ. ನಿತೀಶ್ ಕುಮಾರ್ ಅವರದ್ದು ಏಕಪಕ್ಷೀಯ ನಿರ್ಧಾರ ಎಂಬ ಮಾತುಗಳು ಬಿಹಾರ ರಾಜಕೀಯ ಅಂಗಳದಲ್ಲಿ ಕೇಳಿ ಬರುತ್ತಿವೆ. ಬಿಹಾರ ವಿಧಾನಸಭಾ ಚುನಾವಣೆಯನ್ನು ಬಿಜೆಪಿ–ಜೆಡಿಯು (ಎನ್‌ಡಿಎ) ಜೊತೆಯಾಗಿ ಎದುರಿಸಲಿವೆ. ಈ ಹಿನ್ನೆಲೆ ಕ್ಷೇತ್ರವಾರು ಹಂಚಿಕೆಯ ರಾಜಕೀಯ ತೀವ್ರಗೊಂಡಿದೆ. ಈ ಎಲ್ಲಾ ಬೆಳವಣಿಗೆ ನಡುವೆ ಜೆಡಿಯು ರಾಜ್‌ಪುರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯ ಹೆಸರನ್ನು ಘೋಷಿಸಿದೆ.



# ಗ್ರೇಟ್ ನಿಕೋಬಾರ್ ಮೂಲಸೌಕರ್ಯ ಯೋಜನೆ : ಸೋನಿಯಾ ಗಾಂಧಿ ಖಂಡನೆ

ನವದೆಹಲಿ : ಗ್ರೇಟ್ ನಿಕೋಬಾರ್ ಮೂಲಸೌಕರ್ಯ ಯೋಜನೆಯನ್ನು ಯೋಜಿತ ದುಸ್ಸಾಹಸ ಎಂದು ಕರೆದ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಇದು ದ್ವೀಪದ ಸ್ಥಳೀಯ ಬುಡಕಟ್ಟು ಸಮು



ದಾಯಗಳಿಗೆ ಅಸ್ತಿತ್ವದ ಅಪಾಯವನ್ನುಂಟುಮಾಡುತ್ತದೆ ಮತ್ತು ಸಂವೇದನಾರಹಿತವಾಗಿ ಅದನ್ನು ಜಾರಿಗೆ ತರಲಾಗುತ್ತಿದೆ. ಇದು ಕಾನೂನು ಮತ್ತು ಉದ್ದೇಶಪೂರ್ವಕ ಪ್ರಕ್ರಿಯೆಗಳ ಅಪಹಾಸ್ಯವಾಗಿದೆ ಎಂದು ಹೇಳಿದ್ದಾರೆ.



ಕರಾವಳಿ ತರಂಗಿಣಿ

# ಸಿನಿ ತರಂಗಿಣಿ

## ಎಂ ಜೆ ರವರ "ದೈವ" ಚಿತ್ರದ ಟೀಸರ್ ಬಿಡುಗಡೆ..



ಕಲ್ಪವೃಕ್ಷ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಶ್ರೀಮತಿ ಜಯಮ್ಮ ಪದ್ಮರಾಜ್ ನಿರ್ಮಿಸಿರುವ, ರಾಮಪ್ಪ ಸೋಮಪ್ಪ ಮೇಗಲಮನಿ, ಸೋಮ ಶೇಖರ್ ಜಿ ಪಟ್ಟಣಶೆಟ್ಟಿ ಅವರ ಸಹ ನಿರ್ಮಾಣವಿರುವ ಹಾಗೂ ಎಂ ಜೆ ಅವರು ನಿರ್ದೇಶನದ ಜೊತೆಗೆ ನಾಯಕನಾಗೂ ನಟಿಸಿರುವ "ದೈವ" ಚಿತ್ರದ ಟೀಸರ್ ಶಿಕ್ಷಕರ ದಿನಾಚರಣೆಯ ದಿನದಂದು ಬಿಡುಗಡೆ ಯಾಯಿತು. ನಿರ್ದೇಶಕರಾದ ಗುರು ದೇಶ ಪಾಂಡೆ, ಹರಿ ಸಂತೋಷ್, ಭರ್ಜರಿ ಚೇತನ್, ಜಡೇಶ್ ಕೆ ಹಂಪಿ ಹಾಗೂ ನಿರ್ದೇಶಕರ ಸಂಘದ ಅಧ್ಯಕ್ಷರಾದ ಎನ್ನಾರ್ ಕೆ ವಿಶ್ವನಾಥ್ "ದೈವ" ಚಿತ್ರದ ಟೀಸರ್ ಅನ್ನು ಅನಾವರಣ ಮಾಡಿ ತಮ್ಮ ಪ್ರೋತ್ಸಾಹದ ನುಡಿಗಳ ಮೂಲಕ ಚಿತ್ರ ಯಶಸ್ವಿಯಾಗಲೆಂದು ಶುಭ ಹಾರೈಸಿದರು. ಎಂ ಜೆ(ಮಂಜುನಾಥ್ ಜಯರಾಜ್) ಅಭಿನಯಿಸಿ ನಿರ್ದೇಶನ ಮಾಡಿರುವ ಈ ಚಿತ್ರದ ಟೀಸರ್ ಚೆನ್ನಾಗಿ ಮೂಡಿಬಂದಿದೆ.

## ರಮೇಶ್ ಹುಟ್ಟುಹಬ್ಬಕ್ಕೆ "ದೈಜಿ" ಟೀಸರ್..



ತಮ್ಮ ಅಮೋಘ ಅಭಿನಯದಿಂದ ಜನಮನ ಗೆದ್ದಿರುವ ನಟ ರಮೇಶ್ ಅರವಿಂದ್ ಅವರಿಗೆ ಹುಟ್ಟುಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ ರಮೇಶ್ ಅರವಿಂದ್ ಅವರು ಪ್ರಮುಖಪಾತ್ರದಲ್ಲಿ ನಟಿಸಿರುವ "ದೈಜಿ" ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಟೀಸರ್ ಬಿಡುಗಡೆ ಮಾಡುವ ಮೂಲಕ "ದೈಜಿ" ಚಿತ್ರತಂಡ ತಮ್ಮ ನಾಯಕನಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದೆ. ಟೀಸರ್‌ಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದ್ದು, ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ಟೀಸರ್ ಬಿಡುಗಡೆ ನಂತರ ರಮೇಶ್ ಅರವಿಂದ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿ ಮಾತನಾಡಿದ ನಿರ್ಮಾಪಕ ರವಿ ಕಶ್ಯಪ್, ಇನ್ನೂ ಯಾವುದೇ ಹಾಲಿವುಡ್ ಚಿತ್ರಕ್ಕೂ ಕಡಿಮೆ ಇಲ್ಲದಂತೆ ಮೂಡಿಬಂದಿರುವ ನಮ್ಮ "ದೈಜಿ" ಚಿತ್ರವನ್ನು ಕೆಲವೆ ದಿನಗಳಲ್ಲಿ ನಿಮ್ಮ ಮುಂದೆ ತರುತ್ತೇವೆ ಎಂದರು.

## ಸಿನಿಮಾ ನಿರ್ಮಾಣದತ್ತ ಪ್ರಜ್ವಲ್ ದೇವರಾಜ್..



ಕನ್ನಡ ಪ್ರೇಕ್ಷಕರಿಗೆ ಸದಭಿರುಚಿಯ ಸಿನಿಮಾಗಳ ಮೂಲಕ ಉತ್ತಮ ಮನರಂಜನೆ ನೀಡುವ ಉದ್ದೇಶದಿಂದ ಪ್ರಾರಂಭವಾದ ಸಂಸ್ಥೆ ಪುರಾತನ ಫಿಲಂಸ್. ಈಗಾಗಲೇ ಸನ್ ಆಫ್ ಮುತ್ತಣ್ಣ' ಎಂಬ ಭಾವನಾತ್ಮಕ ಕಥೆಯ ಚಿತ್ರ ನಿರ್ಮಿಸಿ ತೆರೆಗೆ ತರುತ್ತಿರುವ ಪುರಾತನ ಫಿಲಂಸ್ ಮುಂದಿನ ದಿನಗಳಲ್ಲಿ ನಟ ಪ್ರಜ್ವಲ್ ದೇವರಾಜ್ ಅವರ ಜೊತೆಗೂಡಿ ಅತ್ಯುತ್ತಮ ತಾಂತ್ರಿಕತೆಯ ಹಾಗೂ ಸದಭಿರುಚಿಯ ಸಿನಿಮಾಗಳನ್ನು ನಿರ್ಮಾಣ ಮಾಡಲು ಮುಂದಾಗಿದೆ. ಪುರಾತನ ಫಿಲಂಸ್ ಹಾಗೂ ಪ್ರಜ್ವಲ್ ದೇವರಾಜ್ ಸೇರಿ "ಪಿ2 ಪ್ರೊಡಕ್ಷನ್ಸ್" ಎಂಬ ನೂತನ ನಿರ್ಮಾಣ ಸಂಸ್ಥೆಯನ್ನು ಹುಟ್ಟು ಹಾಕಿದ್ದು, ಇದರ ಮೂಲಕ ಪ್ರತಿಭಾವಂತ ಕಲಾವಿದರು, ತಂತ್ರಜ್ಞರು ಮತ್ತು ಒಳ್ಳೆಯ ಕಥೆಗಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಲಿದೆ. ಇದುವರೆಗೆ ಲವರ್ ಬಾಯ್, ಆಕ್ಷನ್ ಹೀರೋ ಆಗಿ ಪಾತ್ರಗಳನ್ನ ನಿರ್ವಹಿಸಿದ ಪ್ರಜ್ವಲ್ ದೇವರಾಜ್, ಚಲನಚಿತ್ರ ನಿರ್ಮಾಣದತ್ತ ಹೆಜ್ಜೆ ಇಟ್ಟಿದ್ದಾರೆ.

## ಚಾಮಯ್ಯ ಸನ್ ಆಫ್ ರಾಮಾಚಾರಿ?

ಚಾಮಯ್ಯ ಸನ್ ಆಫ್ ರಾಮಾಚಾರಿ ಚಿತ್ರದ ಎರಡನೇ ಪ್ರಚಾರ ಸಲುವಾಗಿ ಟ್ರೇಲರ್ ಬಿಡುಗಡೆ ಸಮಾರಂಭವು ಎಸ್‌ಆರ್‌ವಿಯಲ್ಲಿ ಎರಡು ನಿಮಿಷದ ಟ್ರೇಲರ್‌ನೊಂದಿಗೆ ಅನಾವರಣಗೊಂಡಿತು. ಜೋಳಿಗೆ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ರಾಧಾಕೃಷ್ಣ ಪಲ್ಲಕ್ಕಿ ಬರವಣಿಗೆ, ನಿರ್ದೇಶನ ಮತ್ತು ಒಂದು ಮಹತ್ವದ ಪಾತ್ರಕ್ಕೆ ಬಣ್ಣ ಹಚ್ಚಿದ್ದಲ್ಲದೆ ಬಂಡವಾಳ ಹೂಡಿದ್ದು, ಗೌತಮ್‌ಪಲ್ಲಕ್ಕಿ ಮತ್ತು ವಿ. ಗೋವಿಂದರಾಜು ಸಹ ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದಾರೆ. 'ಕೋಟೆ ನಾಡಿನ ನಾಗರ ಹಾವು' ಎಂಬ ಅಡಿಬರಹವಿದೆ. ಈ ಸಂದರ್ಭದಲ್ಲಿ ಮಾತಾನಾಡಿದ ನಿರ್ದೇಶಕರು ಕೆಲವು ಸನ್ನಿವೇಶದಲ್ಲಿ ಚಿತ್ರದುರ್ಗದ ಕೋಟೆಯನ್ನು ಬಳಸದೆ, ಹಿನ್ನಲೆಯಲ್ಲಿರುವ ಮಹಾನ್ ನಾಯಕರ ಕೋಟೆಗಳ ದೃಶ್ಯಗಳನ್ನು ಸೆರೆ ಹಿಡಿಯಲಾಗಿದೆ. ಹಾಗೂ ಇವರೆಲ್ಲರ ಚರಿತ್ರೆಗಳು ಸಣ್ಣದಾಗಿ ಬಂದು ಹೋಗುತ್ತವೆ ಎಂದು ತಿಳಿಸಿದರು.











Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212